# ಇತಿಹಾಸ

## 1. ಭಾರತ- ನಮ್ಮ ಹೆಮ್ಮೆ

1. ಪ್ರಾಚೀನ ಕಾಲದಿಂದಲೂ ನಮ್ಮ ದೇಶವನ್ನು ಭಾರತ ಎಂಬುದಾಗಿ ಕರೆಯಲಾಗುತ್ತಿತ್ತು ಹಿಂದೆ ಯಾವ ಯಾವ ಹೆಸರಿನಿಂದ ಭಾರತವನ್ನು ಹೆಸರಿಸಲಾಗಿದೆ - ಭರತಖಂಡ, ಹಿಂದುಸ್ತಾನ,ಇಂಡಿಯಾ, ಜಂಬೂದ್ವೀಪ

2. ನಮ್ಮ ದೇಶಕ್ಕೆ ಭಾರತ ಎಂಬ ಹೆಸರು ಹೇಗೆ ಬಂತು - ಭರತನು ಆಳಿದ ನಾಡು ಭರತಖಂಡ ಭರತವರ್ಷ (ಭಾರತ ದೇಶ) ಎನಿಸಿತು

3. ಪುರಾಣಗಳ ಪ್ರಕಾರ ವೃಷಭನಾಥನ ಹಿರಿಯ ಮಗನ ಹೆಸರೇನು

- ಭರತ

4. ಯಾವ ದೇಶದ ಜನರು ಸಿಂಧೂ ನದಿ ಬಯಲಿನ ಜನರೊಂದಿಗೆ ಸಂಪರ್ಕಕ್ಕೆ ಬಂದರು - ಪರ್ಶಿಯಾ ದೇಶದ ಜನರು

5. ಪರ್ಷಿಯನ್ನರು ಭಾರತವನ್ನು ಯಾವ ಹೆಸರಿನಿಂದ ಕರೆದರು - ಹಿಂದೂ

6. ಗ್ರೀಕರು ಭಾರತೀಯರೊಂದಿಗೆ ಸಂಪರ್ಕಕ್ಕೆ ಬಂದಾಗ ಅವರ ಬಾಯಲ್ಲಿ 'ಹಿಂದೂ ' ಪದವು ಯಾವ ಪದವಾಗಿ ಬದಲಾಯಿತು - ಇಂಡು

❖ ಸಿಂಧು ನದಿಯು ಇಂಡಸ್ ಆಯಿತು

7. ಮಹಮ್ಮದೀರ ಆಕ್ರಮಣದೊಂದಿಗೆ ಯಾವ ಪದ ಮತ್ತೆ ಬಳಕೆಗೆ ಬಂತು

- ಹಿಂದೂ





Scanned with OKEN Scanner

Navachethana education YouTube & telegram channel Copy Right Reserved

8.ಮಹಮ್ಮದೀರ ಆಕ್ರಮಣದೊಂದಿಗೆ 'ಹಿಂದೂ 'ಪದ ಮತ್ತೆ ಬಳಕೆಗೆ ಬಂತು ಅವರು ಈ ದೇಶವನ್ನು ಏನೆಂದು ಕರೆದರು - ಇಲ್ಲಿಯ ಜನರು ಹಿಂದುಗಳು ಮತ್ತು ಅವರ ಧರ್ಮ ಹಿಂದೂ ಧರ್ಮ' ಎಂದು ಕರೆದರು.

9. ಆಂಗ್ಲರ ಪ್ರಭಾವದಿಂದ ಪಾಶ್ಚಾತ್ಯ ಈ ದೇಶಕ್ಕೆ ಬಂದ ಹೆಸರು - ಇಂಡಿಯಾ ಮತ್ತು ಹಿಂದೂ ಧರ್ಮವು 'ಹಿಂದೂಯಿಸಂ' ಎನಿಸಿತು

10."ಸಂಸ್ಕೃತ ಭಾಷೆಯ ನುಡಿಗಟ್ಟು ಅದ್ಭುತ" ಎಂದು ಹೇಳಿಕೆಯನ್ನು ನೀಡಿದವರು ಯಾರು - ವಿಲಿಯಂ ಜೋನ್ಸ್ ಜೂನಿಯರ್

11. ಸಂಸ್ಕೃತದಿಂದ ಇಂಗ್ಲಿಷಿಗೆ ತರ್ಜುಮೆಗೊಂಡ ಮೊದಲ ಕೃತಿ ಯಾವುದು - ಭಗವದ್ಗೀತೆ

12.ವಿಲಿಯಂ ಜೋನ್ಸ್ ಜೂನಿಯರ್ ಯಾವ ಸಂಸ್ಕೃತ ಕೃತಿಗಳನ್ನು ಇಂಗ್ಲಿಷಿನಲ್ಲಿ ಸಿದ್ಧಗೊಳಿಸಿದನು - 'ಶಾಕುಂತಲಾ'

13. ಭಾರತದ ಅರ್ಥವನ್ನು ತಿಳಿಸಿ

- ಭಾ ಎಂದರೆ ಬೆಳಕು ಜ್ಞಾನವೆಂಬ ಬೆಳಕಿನಲ್ಲಿ
- ರತ (ಆಸಕ್ತ)ರಾಗಿರುವ ಭೂಮಿ( ದೇಶ) 'ಭಾರತ'
  ಆ ಪರಂಪರೆಯಲ್ಲಿ ಇರುವ ನಾವು ಭಾರತೀಯರು

14. ಈ ಕೆಳಗಿನ ಪ್ರಾಚೀನ ಸ್ಥಳ ನಾಮಗಳನ್ನು ಹೊಂದಿಸಿ ಬರೆಯಿರಿ

- ಮಗಧ - ಬಿಹಾರ
- ಕಳಿಂಗ ಒರಿಸ್ಸಾ
- ಚೇರ - ಕೇರಳ
- ಇಂದ್ರಪ್ರಸ್ಥ - ದೆಹಲಿ

*Social Science prepared by Pramod Kumar*



Scanned with OKEN Scanner

- ಪಯಾಗ - ಅಲಹಾಬಾದ್
- ಬರೋಡ - ವಡೋದರಾ

15. ಶನ ಅಥವಾ ಸೊನ್ನೆಯನ್ನು ಮೊತ್ತ ಮೊದಲು ಒಂದು ಸಂಖ್ಯಾ ಸೂಚಕವಾಗಿ ಬಳಸಿದ ಕೀರ್ತಿ - ಭಾರತೀಯರಿಗೆ ಸಲ್ಲುತ್ತದೆ

16. ಭೂಮಿ ದುಂಡಾಗಿದೆ ಸೂರ್ಯನ ಸುತ್ತ ಭೂಮಿ ಪರಿಭ್ರಮಿಸುತ್ತದೆ ಎಂದು ಭಾರತೀಯ ವಿಜ್ಞಾನಿ ಆರ್ಯಭಟ ತೋರಿಸಿಕೊಟ್ಟಿದ್ದು ಆಧುನಿಕ ವಿಜ್ಞಾನದಲ್ಲಿ ಈ ವಾದವನ್ನು ಎತ್ತಿ ಹಿಡಿದ ಕೀರ್ತಿ ಯಾರಿಗೆ ಸಲ್ಲುವುದು

- ಕೊಪರ್ನಿಕಸ್

17. ಭಾರತೀಯರು ನಾವಿಕರಿಗಾಗಿ ರೇಖಾಂಶ ನಕ್ಷೆಯನ್ನು ಉಜ್ಜನಿಯಲ್ಲಿ ಸಿದ್ದಗೊಳಿಸಿದರು ಇಂಥದೊಂದು ನಕ್ಷೆಯನ್ನು ಬಳಸಿಯೇ 15ನೇ ಶತಮಾನದಲ್ಲಿ ಯಾವ ಪೋರ್ಚುಗೀಸ್ ನಾವಿಕ ಭಾರತದ ಪಶ್ಚಿಮ ತೀರವನ್ನು ಮುಟ್ಟಿದ - ವಾಸ್ಕೋಡಿ ಗಾಮ

18. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿ

1.ಫೈಥಾಗೊರೆಸ್‌ನ ಪ್ರಖ್ಯಾತ ಪ್ರಮೇಯವನ್ನು ಆತನಿಗಿಂತ ಎರಡು ಶತಮಾನಗಳ ಮೊದಲೇ ಗುರುತಿಸಿದ್ದವನು ಭಾರತೀಯ ವಿಜ್ಞಾನಿ- ಬೋಧಾಯನ

2.ವಸ್ತುವಿನ ಅವಿಭಾಜ್ಯ ಕಣವಾದ ಅಣುವನ್ನು ಕಣಾದ ಎಂಬ ಭಾರತೀಯ ವಿಜ್ಞಾನಿ, 27 ಶತಮಾನಗಳಷ್ಟು ಹಿಂದೆಯೇ ಪ್ರತಿಪಾದಿಸಿದನು.

ರಷ್ಯಾ ದೇಶದಲ್ಲಿ ಆಣು ಸಿದ್ಧಾಂತಕ್ಕೆ ಸಂಬಂಧಿಸಿದ ಪಾಠವು ಕಾಣಾದನ ಸ್ಮರಣೆಯಿಂದ ಪ್ರಾರಂಭವಾಗುತ್ತದೆ.

3 ಭಾರತೀಯರು ಪ್ರಾಚೀನಕಾಲದಿಂದಲೂ ಉಕ್ಕನ್ನು ತಯಾರಿಸುತ್ತಿದ್ದರು. ನೌಕಾನಿರ್ಮಾಣ ವಿಜ್ಞಾನದಲ್ಲಿ ಭಾರತೀಯರು ಪಥಮಸ್ಥಾನದಲ್ಲಿದ್ದರು. ಗುಜರಾತಿನ 'ಸೂರತ್' ಅತಿ ದೊಡ್ಡ ನೌಕಾನಿರ್ಮಾಣ ಕೇಂದ್ರವೆಂದು ಪ್ರಸಿದ್ಧವಾಗಿತ್ತು.

*Social Science prepared by Pramod Kumar*



Scanned with OKEN Scanner

4.ಭಾರತೀಯರು ಮುಂಗಾರು ಮಾರುತಗಳನ್ನು ಗುರುತಿಸಿದ ಮೇಲೆ ಪ್ರಪಂಚದಲ್ಲಿ ನೌಕಾಯಾನದ ವೇಗ ಹೆಚ್ಚಿತು.

5.ವೈಮಾನಿಕ ಶಾಸ್ತ್ರ, ಯೋಗಶಾಸ್ತ್ರ ಮತ್ತು ಸಂಸ್ಕೃತವು ಕೂಡ ಭಾರತೀಯರ ಕೊಡುಗೆಗಳಾಗಿವೆ

👆👆ಮೇಲಿನ ಎಲ್ಲಾ ಹೇಳಿಕೆಗಳು ಸರಿಯಾಗಿದೆ

19. ಬೌದ್ಧ ಧರ್ಮದ ಭಾರತದ ಗಡಿಯಾಚೆಗೆ ಯಾವ ಯಾವ ರಾಷ್ಟ್ರವರಿಗೂ ವ್ಯಾಪಿಸಿತು - ಅಫ್ಘಾನಿಸ್ತಾನ, ಟಿಬೆಟ್, ಮಂಗೋಲಿಯ, ಚೀನಾ ಕೊರಿಯ ಮತ್ತು ಜಪಾನ್

20. ಜಗತ್ತಿನ ಅತಿ ಎತ್ತರದ ಬುದ್ಧನ ಮೂರ್ತಿ ಯಾವ ರಾಷ್ಟ್ರದಲ್ಲಿ ಕಂಡು ಬರುತ್ತದೆ - ಅಫ್ಘಾನಿಸ್ತಾನದ ಬಮಿಯಾನ್

21. ಅಂಗೋರವಾಟ್ ಹಿಂದೂ ದೇವಾಲಯ ಯಾವ ಸ್ಥಳದಲ್ಲಿ ಕಂಡು ಬರುತ್ತದೆ - ಕಾಂಬೋಡಿಯ

22. ಜಗತ್ಪಸಿದ್ಧ ಬೃಹತ್ ಬೌದ್ಧಾಲಯ ಯಾವ ಸ್ಥಳದಲ್ಲಿ ಕಂಡು ಬರುತ್ತದೆ

- ಜಾವಾದ ಬೊರಬೊದೂರ್

23."ಸತ್ಯವನ್ನು ಹೇಳು. ಧರ್ಮವನ್ನು ಪಾಲಿಸು. ಇದುವರೆಗೆ ಕಲಿತದ್ದರಿಂದಲೇ ತೃಪ್ತನಾಗಬೇಡ, ಗರ್ವಪಡಬೇಡ, ತಾಯಿ, ತಂದೆ, ಆಚಾರ್ಯ ಮತ್ತು ಅತಿಥಿಗಳನ್ನು ದೇವರಂತ ಭಾವಿಸು".

ಈ ಮೇಲಿನ ಹೇಳಿಕೆಯ ಸಾರ್ವತ್ರಿಕ ಭಾರತೀಯ ಮೌಲ್ಯ ಯಾವುದು

- ಆಚಾರ್ಯ ದೇವೋಭವ

*Social Science prepared by Pramod Kumar*



Scanned with OKEN Scanner

24. ಜೈನ ಮತದ ಮೊದಲ ತೀರ್ಥಂಕ - ವೃಷಭನಾಥ

25. ದುಷ್ಯಂತ ಶಕುಂತಲೆಯರ ವೀರಪುತ್ರನಾದ ಭರತನಿಂದ ಭಾರತ ಎಂಬ ಹೆಸರಾಯಿತು.

26. ಆಂಗ್ಲರ ಪ್ರಭಾವದಿಂದ ಬೌದ್ಧಮತ, ಜೈನಮತ ಮತ್ತು ಸಿಖ್ ಮತ ಅನುಕ್ರಮವಾಗಿ ಬುದ್ಧಿಸಂ, ಜೈನಿಸಂ ಮತ್ತು ಸಿಖ್ಖಂ ಎಂದಾಯಿತು

27. ಈ ಕೆಳಗಿನ ಹೇಳಿಕೆಯನ್ನು ಗುರುತಿಸಿರಿ

- ಮಯನ್ಮಾರನ್ನು 'ಬ್ರಹ್ಮದೇಶ,
- ಇಂಡೋನೇಷ್ಯದಲ್ಲಿರುವ ಜಾವಾ, ಸುಮಾತ್ರಾ ಬಾಲಿ ಇವನ್ನು 'ಸುವರ್ಣದ್ವೀಪ',
- ವಿಯೆಟ್ನಾಮನ್ನು 'ಚಂಪಾ'
- ಕಾಂಬೋಡಿಯವನ್ನು' ಕಂಬುಜ' ಎಂದು ಕರೆಯಲಾಗುತ್ತಿತ್ತು.

NAVACHETANA EDUCATIONS
7019752139





Scanned with OKEN Scanner

# ಇತಿಹಾಸ

## 2. ನಮ್ಮ ಹೆಮ್ಮೆಯ ರಾಜ್ಯ- ಕರ್ನಾಟಕ

### ಕರ್ನಾಟಕದಲ್ಲಿ ಆಡಳಿತ ವಿಭಾಗಗಳು

ನಮ್ಮ ನಾಡು ಕರ್ನಾಟಕ. ನಮ್ಮ ರಾಜ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಚರಿತ್ರೆಯಿದೆ. ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ಪ್ರಾಚೀನ ಶಿಲಾಯುಗದ ಕೇಂದ್ರಗಳಿವೆ. ಚರಿತ್ರಕಾರರು, ಅಂತಹ ಸ್ಥಳಗಳನ್ನು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗುರುತಿಸಿದ್ದಾರೆ. ಈ ಅಧ್ಯಾಯದಲ್ಲಿ ನಮ್ಮ ರಾಜ್ಯದ ನಾಲ್ಕು ವಿಭಾಗಗಳ ಬಗ್ಗೆ ಮತ್ತು ಅವುಗಳ ವಿಶೇಷತೆಗಳ ಬಗ್ಗೆ ತಿಳಿದುಕೊಳ್ಳೋಣ.

1) ಬೆಂಗಳೂರು ವಿಭಾಗ 9 ಜಿಲ್ಲೆಗಳನ್ನೊಳಗೊಂಡಿದೆ

2) ಮೈಸೂರು ವಿಭಾಗ 8 ಜಿಲ್ಲೆಗಳನ್ನೊಳಗೊಂಡಿದೆ

3) ಬೆಳಗಾವಿ ವಿಭಾಗ 7 ಜಿಲ್ಲೆಗಳನ್ನೊಳಗೊಂಡಿದೆ

4) ಕಲಬುರಗಿ ವಿಭಾಗ 7 ಜಿಲ್ಲೆಗಳನ್ನೊಳಗೊಂಡಿದೆ

1.ಕರ್ನಾಟಕದಷ್ಟು ಪ್ರಾಚೀನ ಚಾರಿತ್ರಿಕ ಹಿನ್ನಲೆ ಬೆಂಗಳೂರು ವಿಭಾಗಕ್ಕಿದೆ. ಈಗಿನ ಕೋಲಾರ ಅಂದರೆ ಕುವಲಾಲಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೊದಲು ಆಳಿದ ಅರಸರೆಂದರೆ ಗಂಗರ ಮನೆತನದ ಅರಸರು



Scanned with OKEN Scanner

2. ವಿಜಯನಗರ ಅರಸರ ಆಳ್ವಿಕೆಯಲ್ಲಿ ಅನೇಕ ಪಾಳೆಗಾರರು ವಿವಿಧ ಭಾಗಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಅವರು ಆಳುತ್ತಿದ್ದ ಪ್ರದೇಶವನ್ನು ಯಾವ ಹೆಸರಿನಿಂದ ಕರೆಯಲಾಗುತ್ತಿತ್ತು

- ಪಾಳೆಪಟ್ಟು

3. ವಿಜಯನಗರ ಕಾಲದ ಪ್ರಮುಖ ಪಾಳೆಪಟ್ಟುಗಳೆಂದರೆ - ಕೆಳದಿ, ಚಿತ್ರದುರ್ಗ, ಯಲಹಂಕ, ಚಿಕ್ಕಬಳ್ಳಾಪುರ

4. ಯಾವ ನದಿಯಿಂದ ನಿರ್ಮಾಣವಾದ ವಿಶ್ವವಿಖ್ಯಾತ ಜೋಗ ಜಲಪಾತ ಶಿವಮೊಗ್ಗ ಜಿಲ್ಲೆಯಲ್ಲಿದೆ

- ಶರಾವತಿ

❖ ಶರಾವತಿಯು ಪಶ್ಚಿಮ ದಿಕ್ಕಿಗೆ ಹರಿಯುವ ನದಿ

5. ಹೊಂದಿಸಿ ಬರೆಯಿರಿ

1. ಗಾಜನೂರು ಮತ್ತು ತುಂಗಾ ಅಣೆಕಟ್ಟೆ - ಶಿವಮೊಗ್ಗ ಜಿಲ್ಲೆ
2..ಮುತ್ಯಾಲಮಡು ಜಲಾಶಯ - ಬೆಂಗಳೂರು ನಗರ
3.ವಾಣಿ ವಿಲಾಸ ಅಣೆಕಟ್ಟೆ - ಚಿತ್ರದುರ್ಗ ಜಿಲ್ಲೆ
4. ಮಾರ್ಕೋನಹಳ್ಳಿ ಜಲಾಶಯ - ತುಮಕೂರು ಜಿಲ್ಲೆ

6. ಕೆಳಕಂಡ ಯಾವ ಎರಡು ಜಿಲ್ಲೆಗಳಲ್ಲಿ ಕಬ್ಬಿಣದ ಅದಿರು ನಿಕ್ಷೇಪಗಳಿವೆ

ಚಿತ್ರದುರ್ಗ ಮತ್ತು ತುಮಕೂರು

7. ಪರಮಾಣು ಶಕ್ತಿ ಉತ್ಪಾದನೆ ಅಗತ್ಯವಾದ ಖನಿಜವು ಕರ್ನಾಟಕದ ಯಾವ ಜಿಲ್ಲೆಯಲ್ಲಿ ದೊರೆಯುತ್ತದೆ - ಚಿತ್ರದುರ್ಗ



Scanned with OKEN Scanner

8. ಬೆಂಗಳೂರು ವಿಭಾಗಕ್ಕೆ ಬರುವ ಅತಿ ಎತ್ತರದ ಬೆಟ್ಟ ಯಾವುದು - ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಾಲು ರಾಮೇಶ್ವರ ಗುಡ್ಡ

ಅರಣ್ಯಗಳು ವನ್ಯಪ್ರಾಣಿಗಳು ರಾಷ್ಟ್ರೀಯ ಉದ್ಯಾನವನಗಳು

ಹೊಂದಿಸಿ ಬರೆಯಿರಿ

1. ಜೋಗಿಮಟ್ಟಿ ಅರಣ್ಯಧಾಮ, - ಚಿತ್ರದುರ್ಗ
2. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ - ಬೆಂಗಳೂರು
3. ಭದ್ರಾ ವನ್ಯಮೃಗ ಧಾಮ- ಶಿವಮೊಗ್ಗ
4. ಶರಾವತಿ ವನ್ಯಮೃಗ ಧಾಮ- ಶಿವಮೊಗ್ಗ
5. ಶೆಟ್ಟಿಹಳ್ಳಿ ವನ್ಯಮೃಗಧಾಮ- ಶಿವಮೊಗ್ಗ
6. ಗುಡವಿ ಪಕ್ಷಿಧಾಮ - ಶಿವಮೊಗ್ಗ ಜಿಲ್ಲೆ
7. ಮಂಡಗದ್ದೆ ಪಕ್ಷಿಧಾಮ- ಶಿವಮೊಗ್ಗ ಜಿಲ್ಲೆ
8. ಕಗ್ಗಲಡು ಪಕ್ಷಿ ಧಾಮ- ತುಮಕೂರು ಜಿಲ್ಲೆ
9. ರಾಮದೇವರಬೆಟ್ಟ ರಣಹದ್ದು ಪಕ್ಷಿಧಾಮ- ರಾಮನಗರ ಜಿಲ್ಲೆ
10. ಜಯಮಂಗಲಿ ಕೃಷ್ಣಮೃಗ ವನ್ಯಧಾಮ - ತುಮಕೂರು ಜಿಲ್ಲೆ

NAVACHETANA EDUCATIONS
7019752139

9. ನಮ್ಮ ರಾಜ್ಯದ ಕೈಗಾರಿಕಾ ವಲಯದ ನಿರ್ಮಾತೃ ಸರ್. ಎಂ. ವಿಶ್ವೇಶ್ವರಯ್ಯನವರು ಈ ಕೆಳಕಂಡ ಯಾರ ಮುಂದಾಲೋಚನೆಗಳನ್ನು ಕಾರ್ಯರೂಪಕ್ಕೆ ತಂದರು - ನಾಲ್ವಡಿ ಕೃಷ್ಣರಾಜ ಒಡೆಯರ

10. ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಉಕ್ಕು ಮತ್ತು ಕಬ್ಬಿಣ ವಿಶ್ವೇಶ್ವರಯ್ಯ ಕಾರ್ಖಾನೆಯಿದೆ. ಇದನ್ನು ಸ್ಥಾಪಿಸಿದ ವರ್ಷ - 1923



Scanned with OKEN Scanner

❖ ಭದ್ರಾವತಿಯಲ್ಲಿ ಕಾಗದ ಕಾರ್ಖಾನೆ ಸ್ಥಾಪನೆಯಾದ ವರ್ಷ - **1936**

11. ರಾಜ್ಯದ ಮೊದಲ ಸಿಮೆಂಟ್ ಕಾರ್ಖಾನೆ ಯಾವ ಸ್ಥಳದಲ್ಲಿ ಸ್ಥಾಪಿಸಲಾಗಿದೆ

- ಭದ್ರಾವತಿ

12. ಯಾರ ಹೆಸರು ಕನ್ನಡ ನಾಟಕ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ ಮತ್ತು ನಾಟಕರತ್ನ, ನಾಟಕ ಸಾರ್ವಭೌಮ ಎಂಬ ಬಿರುದುಗಳು ಅವರಿಗಿದ್ದವು

- ಗುಬ್ಬಿವೀರಣ್ಣ

13. ಪ್ರಸಿದ್ಧ ಜಾನಪದ ಮ್ಯೂಸಿಯಂ 'ಜಾನಪದಲೋಕ' ವನ್ನು ಯಾರು ಸ್ಥಾಪಿಸಿದರು - ಜನಪದ ತಜ್ಞರಾದ ಸಾಹಿತಿ ಎಚ್.ಎಲ್. ನಾಗೇಗೌಡ

ಸ್ಥಳ - ರಾಮನಗರ

14. ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿದ್ದವರು - ಕೆ. ಸಿ ರೆಡ್ಡಿ

15. ನಮ್ಮ ರಾಜ್ಯದಲ್ಲಿ ಸಮಾಜವಾದಿ ಚಳವಳಿಗೆ ಅಡಿಪಾಯ ಹಾಕಿದವರು

- ಶಾಂತವೇರಿ ಗೋಪಾಲಗೌಡ

16. ಕೆಂಗಲ್ ಹನುಮಂತಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ವಿಧಾನಸೌಧ ಕಟ್ಟಡ ನಿರ್ಮಾಣವಾಯಿತು

17. ವಿಶಾಲ ಮೈಸೂರು ರಾಜ್ಯದ ಮುಖ್ಯಮಂತ್ರಿ - ಎಸ್. ನಿಜಲಿಂಗಪ್ಪ

18. ಪೌರಾಣಿಕವಾಗಿ ಮೈಸೂರನ್ನು ಏನೆಂದು ಕರೆಯಲಾಗಿದೆ - ಮಹಿಷನಾಡು



Scanned with OKEN Scanner

19. ಮೈಸೂರು ಸಂಸ್ಥಾನದ ಮೊದಲ ಅರಸ - ಯದುರಾಯ

20. ಟಿಪ್ಪು ಸುಲ್ತಾನನ ಮರಣದ ನಂತರ ಮೈಸೂರಿನ ಆಡಳಿತು ಮತ್ತೆ ಒಡೆಯರ ಕೈಗೆ ಬಂದ ವರ್ಷ - 1831

21. ಹಾಲೇರಿ ಮನೆತನವು 17ನೆಯ ಶತಮಾನದಲ್ಲಿ ತನ್ನ ಆಳ್ವಿಕೆಯನ್ನು ಸ್ಥಾಪಿಸಿತು. ಬಿದನೂರು ಇವರ ರಾಜಧಾನಿಯಾಗಿತ್ತು.

22. ಹಾಲೇರಿ ಅರಸರಲ್ಲಿ ದೊಡ್ಡವೀರಪ್ಪ ಪ್ರಸಿದ್ಧ ದೊರೆ.

- ಚಿಕ್ಕವೀರರಾಜ ಕೊನೆಯ ಅರಸ.

23. ತುಳುನಾಡಲ್ಲಿ 7ನೆಯ ಶತಮಾನದಿಂದ 14ನೆಯ ಶತಮಾನದವರೆಗೆ ಅಳುಪ ಮನೆತನದ ಅರಸರು ಆಳ್ವಿಕೆ ನಡೆಸಿದರು.

24. ಕರಾವಳಿ ಪ್ರದೇಶವನ್ನು ಬ್ರಿಟಿಷರು ಕೆನರ ಎಂದು ಕರೆದರು. ಈ ಪ್ರದೇಶವನ್ನು ಅವರು 1801ರಲ್ಲಿ ವಶಪಡಿಸಿಕೊಂಡರು.

25. ಜೇನುಕುರುಬರು ಅತಿ ಹೆಚ್ಚು ಜನಸಂಖ್ಯೆಯ ಬುಡಕಟ್ಟು ಸಮುದಾಯವಾಗಿದೆ. ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದಾರೆ.

26. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೊರಗ ಬುಡಕಟ್ಟು ಸಮುದಾಯವಿದೆ.

27. ಕೊಡಗು ಜಿಲ್ಲೆಯಲ್ಲಿ ಕಂಡು ಬರುವ ಬುಡಕಟ್ಟು ಸಮುದಾಯವೆಂದರೆ ಮಲೆಕುಡಿಯರು. ಇವರು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಂಡು ಬರುತ್ತಾರೆ.



Scanned with OKEN Scanner

**28.** ಚಾಮರಾಜನಗರ ಜಿಲ್ಲೆಯಲ್ಲಿ ವಾಸಿಸುವ ಸೋಲಿಗರು ಮತ್ತೊಂದು ಬುಡಕಟ್ಟು ಸಮುದಾಯ.

*29. ಮೈಸೂರು ವಿಭಾಗದ ಪ್ರಮುಖ ರಾಷ್ಟ್ರೀಯ ಉದ್ಯಾನವನ*

- ರಾಜೀವ್ ಗಾಂಧಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ - ಮೈಸೂರು ಜಿಲ್ಲೆ
- ಬಂಡೀಪುರ ರಾಷ್ಟ್ರೀಯ ಉದ್ಯಾನವನ - ಚಾಮರಾಜನಗರ ಜಿಲ್ಲೆ

**30.** ಖೆಡ್ಡ ಎಂಬ ಕಾರ್ಯಾಚರಣೆ ಮೂಲಕ ಯಾವ ಪ್ರಾಣಿಯನ್ನು ಪಳಗಿಸಲಾಗುತ್ತದೆ - ಕಾಡಾನೆ

**31.** ಮೈಸೂರು ನಗರದಲ್ಲಿ ಸರ್ಕಾರಿ ಅನುದಾನಿತ ನಾಟಕ ತಂಡ (ರೆಪರ್ಟರಿ) ರಂಗಾಯಣ ಸ್ಥಾಪನೆಯಾಗಿದೆ.

**32.** ಮೈಸೂರು ವಿಶ್ವವಿದ್ಯಾಲಯ 1915ರಲ್ಲಿ ಆರಂಭವಾಯಿತು

**33.** ಮೈಸೂರು ನಗರದಲ್ಲಿ ಆಹಾರ ಸಂಶೋಧನಾ ಸಂಸ್ಥೆ ಸಿಎಫ್‌ಟಿಆರ್‌ಐ (ಸೆಂಟಲ್ ಫುಡ್ ಟೆಕ್ನಾಲಜಿ ರೀಸರ್ಚ್ ಇನ್ಸಿಟ್ಯೂಟ್ ) ಇದೆ.

**34.** ಕಲೆ-ವಾಸ್ತು ವೈಭವ, ಸಾಹಿತ್ಯ, ಕಲೆಗಳ ತವರೂರು ಮೈಸೂರು ವಿಭಾಗದ ಜಿಲ್ಲೆಗಳು

- ಮಂಡ್ಯ ಜಿಲ್ಲೆಯು ಸಕ್ಕರೆಗೆ ಪ್ರಸಿದ್ಧಿಯಾಗಿದ್ದರೆ
- ಚಿಕ್ಕಮಗಳೂರು ಜಿಲ್ಲೆ ಕಾಫಿಗೆ ಪ್ರಸಿದ್ಧವಾಗಿದೆ,
- ಯಕ್ಷಗಾನ ಕಲೆಗೆ ಕರಾವಳಿ ಜಿಲ್ಲೆಗಳು ಪ್ರಸಿದ್ಧವಾಗಿದ್ದರೆ
- ಕಂಸಾಳೆ ಕುಣಿತಕ್ಕೆ ಚಾಮರಾಜನಗರ ಪ್ರಸಿದ್ಧವಾಗಿದೆ
- ಸೋಮನಾಥರ, ಬೇಲೂರು ಚನ್ನಕೇಶವ ದೇವಾಲಯದ ಮದನಿಕೆ ವಿಗ್ರಹಗಳು



Scanned with OKEN Scanner

- ಶ್ರವಣಬೆಳಗೊಳದ ಗೊಮ್ಮಟೇಶ್ವರದ ಏಕಶಿಲಾ ವಿಗ್ರಹ, ಹಳೇಬಿಡು, ಮೂಡಬಿದ್ರೆ ಮುಂತಾದವು ವಿಶ್ವವಿಖ್ಯಾತ ಕಲಾಕುಸರಿ ಮೆರೆದಿರುವ ದೇವಾಲಯಗಳಿಗೆ ಹೆಸರುವಾಸಿಯಾಗಿವೆ.

35. ತಗಡೂರು ರಾಮಚಂದ್ರರಾವ್ ಅವರು ಗಾಂಧೀಜಿ ಅನುಯಾಯಿಗಳು. ಇವರೂ ಅಸ್ಪಶ್ಯತೆಯ ನಿವಾರಣೆಗಾಗಿ ಹೋರಾಟ ಮಾಡಿದರು.

36. 2021ರ ಅಕ್ಟೋಬರ್ 2ರಂದು ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ ಹೊಸದಾಗಿ ವಿಜಯನಗರ ಜಿಲ್ಲೆಯನ್ನು ಹುಟ್ಟುಹಾಕಲಾಯಿತು.

37. ಬಹುಮನಿ ಮತ್ತು ವಿಜಯನಗರ ಸಾಮ್ರಾಜ್ಯಗಳ ಪತನದ ನಂತರ ಕಲಬುರಗಿ ಪ್ರದೇಶವು ಹೈದರಾಬಾದ್ ನಿಜಾಮನ ಆಳ್ವಿಕೆ ಒಳಪಟ್ಟಿತ್ತು

38. 1948 ರಲ್ಲಿ ನಿಜಾಮ್ ಸಂಸ್ಥಾನ ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು

39. ಬಹಮನಿ ಮತ್ತು ವಿಜಯನಗರ ಆಳ್ವಿಕೆಯ ನಂತರ ಅನೇಕ ಪಾಳೇಗಾರರು ಈ ಪ್ರದೇಶದಲ್ಲಿ ಸ್ವತಂತ್ರರಾದರು. ಅವರಲ್ಲಿ ಹರಪನಹಳ್ಳಿ, ಜರಿಮಲೆ, ಸಂಡೂರು ಮತ್ತು ಸುರಪುರ ಪಾಳೆಗಾರರು ಪ್ರಸಿದ್ಧರಾಗಿದ್ದಾರೆ.

40. ಸುರಪುರ ನಾಯಕ ಕೃಷ್ಣಪ್ಪನಾಯಕರು ಕಾಲವಶರಾದ ಮೇಲೆ ಅವರ ಮಗ ವೆಂಕಟಪ್ಪ ನಾಯಕ ಅಧಿಕಾರಕ್ಕೆ ಬಂದರು.

41. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ತಿಳಿದುಕೊಂಡಿದ್ದ ವೆಂಕಟಪ್ಪ ನಾಯಕರು ಬ್ರಿಟಿಷರ ವಿರುದ್ಧ ಹೋರಾಟಕ್ಕಿಳಿದರು.



Scanned with OKEN Scanner

42. ಬ್ರಿಟಿಷರು ಸುರಪುರವನ್ನು ಹೈದರಾಬಾದ್ ನಿಜಾಮನಿಗೆ ಕೊಡುಗೆಯಾಗಿ ನೀಡಿದರು.

43. ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ನಿಜಾಮನು ಭಾರತ ಗಣರಾಜ್ಯದಲ್ಲಿ ತನ್ನ ಸಂಸ್ಥಾನವನ್ನು ವಿಲೀನಗೊಳಿಸಲು ಸಿದ್ಧನಿರಲಿಲ್ಲ. ಇದರಿಂದ ರೊಚ್ಚಿಗೆದ್ದ ಜನರು ನಿಜಾಮಶಾಹಿ ವಿರುದ್ಧ ಹೋರಾಟವನ್ನು ನಡೆಸಿದರು. ಈ ಭಾಗದ ಸ್ವಾತಂತ್ರ್ಯ ಹೋರಾಟದ ನೇತೃತ್ವವನ್ನು ಸ್ವಾಮಿ ರಮಾನಂದತೀರ್ಥರು ವಹಿಸಿದ್ದರು.

44. ಕೇಂದ್ರ ಸರ್ಕಾರವು ನೇರ ಕ್ರಮವನ್ನು ತೆಗೆದುಕೊಂಡು ನಿಜಾಮ ಸಂಸ್ಥಾನವನ್ನು ಭಾರತ ಗಣರಾಜ್ಯದಲ್ಲಿ ಸೆಪ್ಟೆಂಬರ್ 17, 1948ರಲ್ಲಿ ವಿಲೀನಗೊಳಿಸಿತು.ಈ ಕಾರ್ಯಾಚರಣೆಯ ಮುಖ ರೂವಾರಿ ಆಗ ಕೇಂದ್ರ ಸರ್ಕಾರದಲ್ಲಿ ಗೃಹಸಚಿವರಾಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲರು.

45. ಪ್ರಾಕೃತಿಕ ಸಂಪನ್ಮೂಲ

- ತುಂಗಭದ್ರಾ ಅಣೆಕಟ್ಟೆಯು ರಾಯಚೂರು, ಬಳ್ಳಾರಿ, ವಿಜಯನಗರ ಜಿಲ್ಲೆಗಳಿಗೆ ನೀರಾವರಿ ಒದಗಿಸುತ್ತದೆ.
- ಕೃಷ್ಣ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬಸವಸಾಗರ ಅಣೆಕಟ್ಟೆಯು ರಾಯಚೂರು.ಮತ್ತು ಕಲಬುರಗಿ ಜಿಲ್ಲೆಯ ಕೃಷಿಗೆ ನೀರಾವರಿ ಒದಗಿಸುತ್ತದೆ,
- ಕಾರಂಜಾ ಯೋಜನೆಯು ಬೀದರ್ ಜಿಲ್ಲೆಯ ಕೃಷಿಗೆ ನೀರಾವರಿ ಒದಗಿಸುತ್ತದೆ.

46. ಬಳ್ಳಾರಿ ಜಿಲ್ಲೆಯಲ್ಲಿ ದರೋಜಿ ಕರಡಿ ಧಾಮವಿದೆ.

47. ಬೀದರ್ ಜಿಲ್ಲೆಯ ಬಿದರಿ ಕಲೆಯು ಹೆಸರುವಾಸಿಯಾಗಿದೆ


Scanned with OKEN Scanner

48. ಇಡೀ ಭಾರತದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದನೆ ಮಾಡುವ ಗಣಿ

ರಾಯಚೂರು ಜಿಲ್ಲೆಯ ಹಟ್ಟಿಯಲ್ಲಿದೆ.

49. ಕನ್ನಡದ ಶಾಸ್ತ್ರಕೃತಿ `ಕವಿರಾಜಮಾರ್ಗ' ರಚನೆಯಾದುದು ರಾಷ್ಟ್ರಕೂಟರ ಆಳ್ವಿಕೆಯ

ಕಾಲದಲ್ಲಿ

50. ಆದಿಕವಿ ಪಂಪನು ಅರಸ ಅರಿಕೇಸರಿ ನೀಡಿದ ರಾಜಾಶ್ರಯದಲ್ಲಿ ತನ್ನ ಮಹತ್ವವಾದ

'ವಿಕ್ರಮಾರ್ಜುನವಿಜಯ'ವನ್ನು ರಚಿಸಿದ.

51. ಕನ್ನಡದಲ್ಲಿ ಮೂರು ರತ್ನತ್ರಯರನ್ನು ಗುರುತಿಸಲಾಗುತ್ತದೆ.

- ಪಂಪ, ಪೊನ್ನ ಮತ್ತು ರನ್ನ

52. ಕನ್ನಡದ ಪ್ರಥಮ ವ್ಯಾಕರಣ ಗ್ರಂಥ 'ಶಬ್ದಮಣಿದರ್ಪಣವನ್ನು ರಚಿಸಿದವನು

ಕೇಶೀರಾಜ

53. ಕರ್ನಾಟಕದಲ್ಲಿ 12ನೆಯ ಶತಮಾನದಲ್ಲಿ ಜರುಗಿದ ಮಹತ್ವದ ಸಮಾಜ ಸುಧಾರಣ

ಚಳವಳಿ ಎಂದೇ ಹೆಸರಾಗಿರುವ ವಚನ ಸಾಹಿತ್ಯ ಪರಂಪರೆಯು ಕಲಬುರಗಿ ವಿಭಾಗದ ಕಲ್ಯಾಣ

ನಗರದಲ್ಲಿ ಬೆಳೆಯಿತು.

54. ಬಸವಣ್ಣ ಅಲ್ಲಮಪ್ರಭು, ಅಕ್ಕಮಹಾದೇವಿ ಜೇಡರದಾಸಿಮಯ್ಯ,

ಸಿದ್ಧರಾಮ ಮುಂತಾದ ಶಿವಶರಣರು ಸಿದ್ಧಿ ಸಾಧನೆ ಮಾಡಿದ ಕಾರ್ಯಕ್ಷೇತ್ರ ಕಲಬುರಗಿ ವಿಭಾಗ

55. ಕಲಬುರಗಿ ವಿಭಾಗದ ರಾಯಚೂರು ಜಿಲ್ಲೆಯು ದಾಸ ಸಾಹಿತ್ಯದ ತವರೂರು.


Scanned with OKEN Scanner

56. ಶ್ರೀ ವ್ಯಾಸರಾಯರ ನೇತೃತ್ವದಲ್ಲಿ ದಾಸಕೂಟವನ್ನು ರೂಪಿಸಲಾಯಿತು,

57. ಜನಪದ ಕಲಾವಿದರು, ಸಾಧು-ಸಂತರು. ಫಕೀರರು ಕಟ್ಟಿದ ಹಾಡುಗಳನ್ನು ತತ್ತ್ವ ಪದಗಳು ಎಂದು ಕರೆಯಬಹುದು.

58.ಚೆನ್ನೂರ ಜಲಾಲ್ ಸಾಲ್, ಹನುಮಂತಪ್ಪ ಮುಂತಾದವರು ತತ್ವ ಪದಗಳನ್ನು ರಚಿಸಿದ್ದಾರೆ.

59. ಬೀದರ್ ಜಿಲ್ಲೆಯ ಬಿದರಿ ಕಲೆ,, ಕನ್ನಾಳದ ಗೊಂಬೆಗಳು, ಕೊಪಳ ಜಿಲ್ಲೆಯ ಕೌದಿಗಳು ಮುಂತಾದವು ಪ್ರಚಲಿತದಲ್ಲಿರುವ ಸಾಂಪ್ರದಾಯಿಕ ಕಲೆಗಳಾಗಿವೆ.

60..ಬನವಾಸಿಯು ಕದಂಬರ ರಾಜಧಾನಿಯಾಗಿತ್ತು.

61. ಚಾಲುಕ್ಯರ ರಾಜಧಾನಿ ಬಾದಾಮಿ ಇಲ್ಲಿದೆ. ಬಾದಾಮಿ, ಪಟ್ಟದಕಲ್ಲು ಮತ್ತು ಐಹೊಳೆಗಳಲ್ಲಿ ವಿಶ್ವ ಪ್ರಸಿದ್ಧ ದೇವಾಲಯಗಳಿವೆ.

- ಬಾದಾಮಿಯ ಗವಿಗಳಲ್ಲಿ ಶಿಲ್ಪಕಲಾ ವೈಭವವನ್ನು ಕಾಣಬಹುದು.

62.ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಬೆಳಗಾವಿ ವಿಭಾಗದ ಜಿಲ್ಲೆಗಳು ಅದ್ಭುತ ಪಾತ್ರ ನಿರ್ವಹಿಸಿವೆ. ಕಿತ್ತೂರು ರಾಣಿ ಚೆನ್ನಮ್ಮ 1824ರಲ್ಲಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದಳು.

63. ಬೆಳಗಾವಿಯಲ್ಲಿ 1924ರಲ್ಲಿ ಮಹಾತ್ಮ ಗಾಂಧಿ ಅಧ್ಯಕ್ಷತೆಯ ಕಾಂಗ್ರೆಸ್ ಅಧಿವೇಶನ ನಡೆಯಿತು.

64. ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ ನಿರಾಕರಣೆ ಸತ್ಯಾಗ್ರಹ ನಡೆಯಿತು.

65. ಅಂಶಿ ರಾಷ್ಟ್ರೀಯ ಉದ್ಯಾನವನ ಕಾಳಿ ನದಿಯ ದಡದಲ್ಲಿದೆ.



Scanned with OKEN Scanner

Navachethana education YouTube & telegram channel Copy Rights Reserved

## ಇತಿಹಾಸ

3. ಮೌರ್ಯರು ಮತ್ತು ಕುಷಾಣರು

4. ಗುಪ್ತರು ಮತ್ತು ವರ್ಧನರು

## ಮೌರ್ಯರು ಮತ್ತು ಕುಷಾಣರು

1. ಭಾರತದ ಮೊಟ್ಟ ಮೊದಲ ಸಾಮ್ರಾಜ್ಯ ಯಾವುದು - ಮೌರ್ಯ ಸಾಮ್ರಾಜ್ಯ

2. ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ

- ಚಂದ್ರಗುಪ್ತ ಮೌರ್ಯ

3. ತಂದೆಯನ್ನು ಕಳೆದುಕೊಂಡಿದ್ದ ಚಂದ್ರಗುಪ್ತ ಮೌರ್ಯನನ್ನು ವಿಷ್ಣುಗುಪ್ತ ಎಂಬ ಬ್ರಾಹ್ಮಣನು ಯಾವ ನಗರಕ್ಕೆ ಕರೆದೊಯ್ದು - ತಕ್ಷಶಿಲಾ ನಗರಕ್ಕೆ

4. ಕೌಟಿಲ್ಯ ಚಂದ್ರಗುಪ್ತ ಮೌರ್ಯನನ್ನು ತಕ್ಷಶಿಲಾ ನಗರಕ್ಕೆ ಕರೆದೊಯ್ದು ಅಲ್ಲಿ ಯೋಗ್ಯ ಶಿಕ್ಷಣವನ್ನು ಕೊಡಿಸಿದನು ಇದರ ಉದ್ದೇಶ - ಚಂದ್ರಗುಪ್ತನ ಮೂಲಕ ಭಾರತದ ವಾಯುವ್ಯ ಭೂಭಾಗವನ್ನು ಗ್ರೀಕರ ಆಳ್ವಿಕೆಯಿಂದ ಮುಕ್ತಗೊಳಿಸುವುದಾಗಿತ್ತು,

5. ಮಗದ ರಾಜನ ದುಷ್ಟ ಆಡಳಿತವನ್ನು ಕಿತ್ತೊಗೆಯುವುದು ಯಾರ ಗುರಿಯಾಗಿತ್ತು - ಕೌಟಿಲ್ಯನ ಗುರಿಯಾಗಿತ್ತು



Scanned with OKEN Scanner

Navachethana education YouTube & telegram channel Copy Rights Reserved

6. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1.ಶಿಕ್ಷಣ ಮುಗಿಸಿದ ತರುವಾಯ ಚಂದ್ರಗುಪ್ತನು ಕೌಟಿಲ್ಯನ ಆದೇಶದಂತೆ ಸೈನ್ಯವೊಂದನ್ನು ಕಟ್ಟಿದ ☑

2.ಗ್ರೀಕರೊಡನೆ ಯುದ್ಧ ಹೂಡಿ ಅವರನ್ನು ಭಾರತದ ನೆಲದಿಂದ ಹೊರದಬ್ಬಿದನು. ☑

3.ಅನಂತರ ಮಗಧ ರಾಜರನ್ನು ಸಂಹರಿಸಿ, ಉತ್ತರ ಭಾರತದಲ್ಲಿ ಸಾಮ್ರಾಜ್ಯವೊಂದನ್ನು ಸ್ಥಾಪನೆ ಮಾಡಿದನು. ☑

4. ಪಾಟಲೀಪುತ್ರ (ಪಟ್ನಾ ) ಸಾಮ್ರಾಜ್ಯದ ರಾಜಧಾನಿಯಾಯಿತು. ☑

ಮೇಲಿನ ಎಲ್ಲ ಹೇಳಿಕೆಯು ಸರಿಯಾಗಿದೆ

7.ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1. ಸೆಲ್ಯೂಕಸ್ ಎಂಬ ಗ್ರೀಕ್ ಅಧಿಕಾರಿಯು, ಭಾರತದ ಮೇಲೆ ದಂಡೆತ್ತಿ ಬಂದನು. ಚಂದ್ರಗುಪ್ತನು ಅವನನ್ನು ಯುದ್ಧದಲ್ಲಿ ಹೀನಾಯವಾಗಿ ಸೋಲಿಸಿದನು ☑

2. ಸೆಲ್ಯೂಕಸ್ ಶಾಂತಿ ಒಪ್ಪಂದವೊಂದನ್ನು ಮಾಡಿಕೊಂಡು ಅಫ್ ಘಾನಿಸ್ತಾನ ಮತ್ತು ಬಲೂಚಿಸ್ತಾನದ ಭೂಭಾಗಗಳನ್ನು ಚಂದ್ರಗುಪ್ತನಿಗೆ ಬಿಟ್ಟುಕೊಟ್ಟನು ☑

3.ಇದಕ್ಕೆ ಪ್ರತಿಯಾಗಿ ಚಂದ್ರಗುಪ್ತನು ಯುದ್ಧ ತರಬೇತಿ ಪಡೆದ 500 ಆನೆಗಳನ್ನು ಉಡುಗೊರೆಯಾಗಿ ಆತನಿಗೆ ಕೊಟ್ಟನು. ☑

4. ಸೆಲ್ಯೂಕಸನು ತನ್ನ ರಾಯಭಾರಿಯಾಗಿ ಮೆಗಸ್ತನೀಸ್ ಎಂಬವನನ್ನು ಚಂದ್ರಗುಪ್ತನ ಆಸ್ಥಾನಕ್ಕೆ ಕಳುಹಿಸಿದರು. ☑



Scanned with OKEN Scanner

Navachethana education YouTube & telegram channel Copy Rights Reserved

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

8. ಸೆಲ್ಯೂಕಸನು ತನ್ನ ರಾಯಭಾರಿಯಾಗಿ ಮೆಗಸ್ತನೀಸ್ ಎಂಬವನನ್ನು ಯಾರ ಆಸ್ಥಾನಕ್ಕೆ ಕಳುಹಿಸಿದನು. - ಚಂದ್ರಗುಪ್ತ ಮೌರ್ಯ

9. ಮೆಗಸ್ತನೀಸ್ ಆ ಕಾಲದ ಭಾರತದ ಸ್ಥಿತಿಗತಿಗಳ ಬಗ್ಗೆ ಬರೆದಿಟ್ಟ ಪುಸ್ತಕ ಯಾವುದು - ಇಂಡಿಕಾ

10. ಯಾರು ಚಂದ್ರಗುಪ್ತ ಮೌರ್ಯನ ಪ್ರಧಾನ ಮಂತ್ರಿಯಾಗಿದ್ದರು - ಕೌಟಿಲ್ಯ

11. ಕೌಟಿಲ್ಯ ಬರೆದ ಅರ್ಥಶಾಸ್ತ್ರ ಕೃತಿಯು ಯಾವುದಕ್ಕೆ ಸಂಬಂಧಿಸಿದೆ - ರಾಜ್ಯದ ಆಡಳಿತಗಾರರಿಗೆ ಮಾರ್ಗದರ್ಶನ ನೀಡುವ ಉತ್ತಮ ಕೃತಿಯಾಗಿದೆ

12. ಚಂದ್ರಗುಪ್ತನ ನಂತರ ಅಧಿಕಾರಕ್ಕೆ ಬಂದವನು ಯಾರು - ಚಂದ್ರಗುಪ್ತನ ಅನಂತರ ಆತನ ಮಗನಾದ ಬಿಂದುಸಾರನು ಸಿಂಹಾಸನವನ್ನೇರಿದನು

13. ಬಿಂದುಸಾರನ ಅನಂತರ ಅಧಿಕಾರಕ್ಕೆ ಬಂದವನು - ಅಶೋಕ

14. ಕರ್ನಾಟಕದಲ್ಲಿ ಎಷ್ಟು ಅಶೋಕನ ಶಾಸನಗಳು ದೊರಕಿವೆ - 14 ಶಾಸನಗಳು

15. ಅಶೋಕನ ಆಳ್ವಿಕೆಯ ಕಾಲದ ಮಹತ್ವದ ಘಟನೆಯೆಂದರೆ ಕಳಿಂಗ ಯುದ್ಧ

16. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1. ಯುದ್ಧದಲ್ಲಿ ಸ್ವತಃ ಭಾಗಿಯಾಗಿದ್ದ ಅಶೋಕನು ಯುದ್ಧದ ಭಯಾನಕ ಸಾವು ನೋವುಗಳಿಂದ ತತ್ತರಿಸಿ ಹೋದನು. ✅



Scanned with OKEN Scanner

Navachethana education YouTube & telegram channel Copy Rights Reserved

2. ಪರಿಣಾಮವಾಗಿ ಅವನ ಮನಸ್ಸು ಪರಿವರ್ತನೆಗೊಂಡಿತು ☑

3. ಆ ಕ್ಷಣದಿಂದಲೇ ಯುದ್ಧ ಮಾಡುವುದನ್ನು ತೊರೆಯಲು ದೃಢ ನಿರ್ಧಾರ ಮಾಡಿದನು. ☑

4. ಧರ್ಮದ ವಿಜಯವೇ ನಿಜವಾದ ವಿಜಯ ಎಂಬುದನ್ನು ಮನಗಂಡನು ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

17.ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1.ಅಲ್ಪಕಾಲದಲ್ಲೇ ಅಶೋಕನು ಬುದ್ಧನ ಆದರ್ಶಗಳಿಂದ ಪ್ರಭಾವಿತಗೊಂಡು ಅವುಗಳನ್ನು ತನ್ನ ಪ್ರಜೆಗಳಿಗೆ ಬೋಧನೆ ಮಾಡಿದನು ☑

2.ಮತೀಯ ಆಚರಣೆಗಿಂದ ಉತ್ತಮ ಗುಣ, ನಡತೆಗಳೇ ಹೆಚ್ಚು ಮುಖ್ಯವಾದದ್ದು ☑

3.ಹಿರಿಯರು ಮತ್ತು ಗುರುಗಳನ್ನು ಗೌರವದಿಂದ ಕಾಣಬೇಕು, ಅಹಿಂಸೆಯೇ ಪರಮ ಧರ್ಮ, ಜೀವರಾಶಿಗಳಿಗೆ ಹಿಂಸೆ ಮಾಡಬಾರದು. ☑

4.ವಿಶ್ವಪ್ರೇಮವನ್ನು ಸಾರಿದ ಆದರ್ಶವಾದಿ ಸಾಮ್ರಾಟನು ಜಗತ್ತಿನ ಇತಿಹಾಸದಲ್ಲಿ ಪಾಯಶಃ ಬೇರೊಬ್ಬನಿಲ್ಲ. ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

18. ಅಶೋಕನು ಪಾಟಲೀಪುತ್ರದಲ್ಲಿ ಬೌದ್ಧ ಸಮ್ಮೇಳನವನ್ನು ನಡೆಸಿದನು.



Scanned with OKEN Scanner

Navachethana education YouTube & telegram channel Copy Rights Reserved

19. ಈ ಕೆಳಕಂಡವುಗಳಲ್ಲಿ ಮೌರ್ಯರ ಆಡಳಿತ ಪದ್ಧತಿ ಸಂಬಂಧಿಸಿದಂತೆ ಯಾವುದು ಸರಿಯಾಗಿದೆ

1. ಕೇಂದ್ರ ಆಡಳಿತಕ್ಕೆ ರಾಜನೇ ಆಡಳಿತ ವ್ಯವಸ್ಥೆಯ ಮುಖ್ಯಸ್ಥನಾಗಿದ್ದನು. ☑
2. ಎಲ್ಲ ಅಧಿಕಾರಗಳು ಆತನ ಕೈಯಲ್ಲಿದ್ದವು ರಾಜನಿಗೆ ಸಲಹೆ ನೀಡಲು ಮಂತ್ರಿ ಮಂಡಲವೊಂದಿತ್ತು. ☑
3. ಆಡಳಿತದ ವಿಭಾಗಗಳನ್ನು ನೋಡಿಕೊಳ್ಳಲು ಉನ್ನತ ಅಧಿಕಾರಿಗಳಿದ್ದರು. ☑
4. ಅವರಲ್ಲಿ 'ಧರ್ಮಮಹಾಮಾತ್ರರು' ಎಂಬ ವಿಶೇಷ ಅಧಿಕಾರಿಗಳು ಜನರಲ್ಲಿ ಉತ್ತಮ ನೀತಿ ನಡತೆಯನ್ನು ಪ್ರಚಾರ ಮಾಡುತ್ತಿದ್ದರು. ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

20. ಅಶೋಕನ ಕಾಲದ ಸ್ತೂಪ ಮಧ್ಯಪ್ರದೇಶದ ಸಾಂಚಿ ಎಂಬಲ್ಲಿದೆ.

21. ಸಾರನಾಥದ ವಸ್ತುಸಂಗ್ರಹಾಲಯದಲ್ಲಿ 'ಸಿಂಹಬೋದಿಗೆ ಸ್ತಂಭವನ್ನು ಕಾಣಬಹುದು. ಈ ಸಿಂಹಬೋದಿಗೆಯು ನಮ್ಮ ರಾಷ್ಟ್ರ ಲಾಂಛನ.

22. ಮೌರ್ಯ ಸಾಮ್ರಾಜ್ಯವು ಅಶೋಕನ ಮರಣಾನಂತರದ ಐವತ್ತು ವರ್ಷಗಳಲ್ಲಿ ಪತನಗೊಂಡಿತು.

23.ಯಾವ ರಾಜವಂಶವು ಸುಮಾರು 2000 ವರ್ಷಗಳ ಹಿಂದೆ ಚಂಧಾರ (ಈಗಿನ ಆಫ್ಘಾನಿಸ್ತಾನ) ಎಂಬ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿತ್ತು - ಕುಷಾಣರು

24. ಕುಷಾಣ ಸಂತತಿಯ ಮೊದಲ ದೊರೆ - ಕುಜುಲ ಕಡ್ ಫೀಸಿಸ್

6ನೇ ತರಗತಿಯ ಸಮಾಜ ವಿಜ್ಞಾನ ( ಪರಿಷ್ಕೃತ -2022)



Scanned with OKEN Scanner

Navachethana education YouTube & telegram channel Copy Rights Reserved

25. ಚಿನ್ನದ ನಾಣ್ಯಗಳನ್ನು ಬಳಕೆಗೆ ತಂದ ಪ್ರಥಮ ಕುಷಾಣ ದೊರೆ - ವೀಮ ಕಡ್ ಫೀಸಿಸ್

26. ಕುಷಾಣ ದೊರೆಗಳಲ್ಲಿ ಅತ್ಯಂತ ಪ್ರಸಿದ್ಧನಾದವನು - ಕನಿಷ್ಕ

27. ಕುಶಾಣರ ಕಾಲದಲ್ಲಿ ಬೆಳೆದು ಬಂದ ಕಲೆ - ಗಾಂಧಾರ ಕಲೆ

- ವಿವಿಧ ಕಲಾ ಶೈಲಿಗಳು (ವಿಶಿಷ್ಟ ವಿಧಾನಗಳು) ಬೆರೆತು ಗಾಂಧಾರ ಮತ್ತು ಮಥುರಾ ಎಂಬ ಹೊಸ ಶೈಲಿಗಳು ಹುಟ್ಟಿಕೊಂಡವು.

28. ಅಶ್ವಘೋಷನು ಬರೆದ ಗ್ರಂಥ - 'ಬುದ್ಧ ಚರಿತೆ'

29. ಕುಷಾಣರ ಕಾಲದ ಪ್ರಮುಖ ಬೌದ್ಧ ವಿದ್ವಾಂಸರು - ಅಶ್ವಘೋಷ, ವಸುಮಿತ್ರ, ನಾಗಾರ್ಜುನ,

30. ಚರಕ ಎಂಬವನು ಕನಿಷ್ಕನ ವೈದ್ಯನಾಗಿದ್ದ ಅವನ ಪ್ರಸಿದ್ಧ ಆಯುರ್ವೇದ ಗ್ರಂಥ ಯಾವುದು - ಚರಕ ಸಂಹಿತೆ

31. ಆಯುರ್ವೇದವು ಪ್ರಾಚೀನ ಭಾರತೀಯ ವೈದ್ಯಕೀಯ ಪದ್ಧತಿಯಾಗಿದೆ.

32. ಅಶೋಕನ ಶಾಸನಗಳು ಕರ್ನಾಟಕದಲ್ಲಿ ಯಾವ ಜಿಲ್ಲೆಗಳಲ್ಲಿ ಕಂಡು ಬರುತ್ತದೆ ರಾಯಚೂರು, ಕೊಪ್ಪಳ, ಚಿತ್ರದುರ್ಗ, ಬಳ್ಳಾರಿ - ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿವೆ.

33. ' ದೇವಾನಾಂಪ್ರಿಯ ಮತ್ತು ಪ್ರಿಯದರ್ಶಿ ' ಎಂಬ ಉಲ್ಲೇಖ ಒಳಗೊಂಡ ಅಶೋಕನ ಶಾಸನ - ಮಸ್ಕಿ ಶಾಸನ ( ರಾಯಚೂರು ಜಿಲ್ಲೆ )

34. ಅಶೋಕನು ಬೌದ್ಧ ರಾಯಭಾರಿಗಳನ್ನು ಭಾರತದ ಬೇರೆ ಬೇರೆ ರಾಜ್ಯಗಳಿಗೆ ಮಾತ್ರವಲ್ಲದೆ ಬರ್ಮಾ ( ಮಾಯನ್ಮಾರ್ ) ಶ್ರೀಲಂಕಾ, ಈಜಿಪ್ಟ್, ಪಶ್ಚಿಮ ಏಷ್ಯ ಹಾಗೂ ಪೂರ್ವ ಯುರೋಪ್ ದೇಶಗಳಿಗೂ ಕಳುಹಿಸಿದನು.

6ನೇ ತರಗತಿಯ ಸಮಾಜ ವಿಜ್ಞಾನ ( ಪರಿಷ್ಕೃತ -2022)



Scanned with OKEN Scanner

Navachethana education YouTube & telegram channel Copy Rights Reserved

35. ಅಶೋಕನ ಹಿರಿಯ ಮಗ ಮಹೇಂದ್ರ ಮತ್ತು ಹಿರಿಯ ಪುತ್ರಿ ಸಂಘಮಿತ್ರಾ ಶ್ರೀಲಂಕೆಗೆ ತೆರಳಿದರು.

36.ಅಶೋಕನ ಕಾಲದಲ್ಲಿ ವಾಸ್ತುಶಿಲ್ಪ ನಿರ್ಮಾಣಕ್ಕಾಗಿ ಕಟ್ಟಿಗೆ ಮತ್ತು ಇಟ್ಟಿಗೆಗಳ ಬದಲು ಕಲ್ಲುಗಳ ಬಳಕೆ ಆರಂಭವಾಯಿತು.

37 ಪ್ರಯಾಗದಲ್ಲಿ ಪ್ರಾಚೀನ ಏಕಶಿಲಾ ಸ್ತಂಭವೊಂದಿದೆ. ಅದು ಅಶೋಕನ ಕಾಲದ್ದು

38. ಗುಪ್ತ ವಂಶದ ಸ್ಥಾಪಕ - ಶ್ರೀಗುಪ್ತ / ಗುಪ್ತರ ರಾಜಧಾನಿ - ಪಾಟಲಿಪುತ್ರ

39. ಸಮುದ್ರಗುಪ್ತನ ಸಾಧನೆಗಳನ್ನು ತಿಳಿಸುವ ಶಾಸನ – ಅಲಹಾಬಾದ್ ಸ್ತಂಭ ಶಾಸನ

40. ಅಲಹಾಬಾದ್ ಸ್ತಂಭ ಶಾಸನವನ್ನು ರಚಿಸಿದವರು - ಹರಿಷೇಣ

41. ಕಾಂಚಿಯ ರಾಜನನ್ನು ಸದೆಬಡಿದು ದಂಡಯಾತ್ರೆಯ ನೆನಪಿಗಾಗಿ ರಾಜಧಾನಿಯಾದ ಪಾಟಲೀಪುತ್ರದಲ್ಲಿ ಅತ್ಯಂತ ವಿಜೃಂಭಣೆಯಿಂದ ಅಶ್ವಮೇಧಯಾಗವನ್ನು ಮಾಡಿದನು

42. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1.ಸಮುದ್ರಗುಪ್ತನು ವಿದ್ಯಾಪೋಷಕನಾಗಿದ್ದನು. ಸ್ವತಃ ಮಹಾಕವಿ ಹಾಗೂ ಸಂಗೀತಗಾರನಾಗಿದ್ದ ☑

2.ಈತನು 'ಕವಿರಾಜ 'ಎಂಬ ಬಿರುದನ್ನು ಧರಿಸಿದ್ದನು. ಅವನು ವೀಣೆ ನುಡಿಸುವ ಚಿತ್ರವಿರುವ ನಾಣ್ಯಗಳಿವೆ ☑

3.ವಸುಬಂಧು ಎಂಬ ಹಿರಿಯ ಬೌದ್ಧ ವಿದ್ವಾಂಸ ಅವನ ಮಂತ್ರಿಯಾಗಿದ್ದನು. ☑



Scanned with OKEN Scanner

Navachethana education YouTube & telegram channel Copy Rights Reserved

4. ಸಮುದ್ರಗುಪ್ತನ ಚಿನ್ನದ ನಾಣ್ಯಗಳು ಗುಪ್ತ ಸಾಮ್ರಾಜ್ಯದ ಶಕ್ತಿ, ಸಂಪತ್ತು ಹಾಗೂ ವೈಭವವನ್ನು ಪ್ರತಿಬಿಂಬಿಸುತ್ತವೆ. ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

43. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1. ಗುಜರಾತಿನಲ್ಲಿ ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲ ಆಳ್ವಿಕೆ ನಡೆಸುತ್ತಿದ್ದ ಸತ್ರಪರನ್ನು ಚಂದ್ರಗುಪ್ತನು ಸೋಲಿಸಿದರು. ☑
2. ಇದರಿಂದಾಗಿ ಗುಜರಾತಿನಲ್ಲಿ ಪರಕೀಯರ ಆಳ್ವಿಕೆ ಅಂತ್ಯಗೊಂಡಿತು. ಇದು ಅವನ ಮುತ್ತು ಸೈನಿಕ ಸಾಧನೆಯಾಗಿತ್ತು. ☑
3. ಆತನಿಗೆ ಶಕಾರಿ ಮತ್ತು ವಿಕ್ರಮಾದಿತ್ಯ ಎಂಬ ಬಿರುದುಗಳಿದ್ದವು, ☑
4. ಚಂದ್ರಗುಪ್ತನು ಹೊಸ ಬಗೆಯ ಚಿನ್ನದ ನಾಣ್ಯಗಳನ್ನು ಹೊರಡಿಸಿದನು. ಆತನ ಆಸ್ಥಾನದಲ್ಲಿ ಮಹಾಕವಿ ಕಾಳಿದಾಸನೂ ಸೇರಿದಂತೆ ಒಂಬತ್ತು ಮಂದಿ ಪ್ರಖ್ಯಾತ ವಿದ್ವಾಂಸರಿದ್ದರು. ☑

44. ಗುಪ್ತರ ಆಳ್ವಿಕೆಯ ಅವಧಿಯಲ್ಲಿ ಭಾರತಕ್ಕೆ ಬಂದ ಚೀನಿಯಾತ್ರಿಕ

- ಫಾಹಿಯಾನ್

45. ಗುಪ್ತರ ಕಾಲದಲ್ಲಿ ಸಂಸ್ಕೃತವು ಪ್ರಧಾನ ಭಾಷೆಯಾಗಿತ್ತಲ್ಲದೆ ರಾಜ್ಯಭಾಷೆ ಕೂಡ ಆಗಿತ್ತು. ರಾಜಾಶ್ರಯ ಪಡೆದು ಸಂಸ್ಕೃತ ಸಾಹಿತ್ಯವು ವಿಶೇಷವಾಗಿ ಅರಳಿತು.

ಗುಪ್ತರ ಕಾಲದ ಸಾಹಿತ್ಯ - ಗುಪ್ತರ ಯುಗವನ್ನು "ಸಂಸ್ಕೃತ ಸಾಹಿತ್ಯದ ಸುವರ್ಣಯುಗ" ಎಂದು ಕರೆಯಲಾಗಿದೆ.



Scanned with OKEN Scanner

Navachethana education YouTube & telegram channel Copy Rights Reserved

ಎರಡನೇ ಚಂದ್ರಗುಪ್ತನ ಆಸ್ಥಾನದಲ್ಲಿ ನವರತ್ನ ಎಂಬ ಕವಿಗಳ ಕೊಟವಿತ್ತು.

1. ಕಾಳಿದಾಸ - ಕಾಳಿದಾಸನು ನಾಲ್ಕು ಕಾವ್ಯಗಳು ಮತ್ತು ಮೂರು ನಾಟಕಗಳನ್ನು ರಚಿಸಿದನು, 'ಅಭಿಜ್ಞಾನ ಶಾಕುಂತಲಾ' ಆತನ ಶ್ರೇಷ್ಠ ನಾಟಕ,

ಕಾವ್ಯಗಳು - ಮೇಘದೂತ, ರಘುವಂಶ, ಕುಮಾರ ಸಂಭವ, ಋತು ಸಂಹಾರ

ನಾಟಕ - ಅಭಿಜ್ಞಾನ ಶಾಕುಂತಲ, ಮಾಳವಿಕಾಗ್ನಿ ಮಿತ್ರ, ವಿಕ್ರಮೋರ್ವಶಿಯ

ಸಾಹಿತ್ಯದಲ್ಲಿ ಕಾಳಿದಾಸನ ಕೃತಿಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಅವನನ್ನು 'ಕವಿಕುಲ ಗುರು' ಎಂಬುದಾಗಿ ಪ್ರಶಂಸೆ ಮಾಡಲಾಗಿದೆ.

2. ವರಹಮಿಹಿರ -ಬೃಹತ್ ಸಂಹಿತೆ
3. ಅಮರಸಿಂಹ - ಅಮರಕೋಶ
4. ಧನ್ವಂತ್ರಿ - ಆಯುರ್ವೇದ ನಿಘಂಟು
5. ಘಟಕರ್ಪರ - ಘಟಕರ್ಪರಕಾವ್ಯ
6. ವರರುಚಿ - ವ್ಯಾಕರಣ
7. ಶಂಕು - ಶಿಲ್ಪ ಶಾಸ್ತ್ರ
8. ಕ್ಷಪಣ - ಜ್ಯೋತಿಷ್ಯ ಶಾಸ್ತ್ರ
9. ವೇತಾಲಭಟ್ಟ - ಮಂತ್ರಶ್ರಾಸ್ತ್ರ

46. ವಾಸ್ತುಶಿಲ್ಪ ನಿರ್ಮದ ಇತಿಹಾಸದಲ್ಲಿ ಗುಪ್ತರ ಕಾಲವನ್ನು ಸುವರ್ಣಯುಗವೆನ್ನಬಹುದು.



Scanned with OKEN Scanner

Navachethana education YouTube & telegram channel Copy Rights Reserved

- ನಮ್ಮ ದೇಶದಲ್ಲಿ ದೇವಾಲಯ ನಿರ್ಮಾಣ ವಾಸ್ತು ಆರಂಭಗೊಂಡದ್ದು ಗುಪ್ತರ ಕಾಲದಲ್ಲಿ, ಮಧ್ಯಪ್ರದೇಶದ ಸಾಂಚಿಯ ದೇವಾಲಯವು ಭಾರತದಲ್ಲೇ ಅತಿ ಪ್ರಾಚೀನವಾದದು

47. ಗುಪ್ತರ ಶ್ರೇಷ್ಠ ದೇವಾಲಯಗಳು ಮಧ್ಯಪ್ರದೇಶದ ಭಿತರ್‌ಗಾಂವ್ ಮತ್ತು ದೇವಗಢದಲ್ಲಿವೆ.

- ದೇವಗಢದ ದಶಾವತಾರ ದೇವಾಲಯದಲ್ಲಿರುವ ವಿಷ್ಣುವಿನ ಮೂರ್ತಿಶಿಲ್ಪ ಸುಂದರವಾಗಿದೆ.

48. ವಾರಾಣಸಿಯ ಸಮೀಪದ ಸಾರನಾಥ ಎಂಬಲ್ಲಿ ಇರುವ 128 ಅಡಿ ಎತ್ತರದ ಧಮೇಖ್ ಸ್ತೂಪವು ಗುಪ್ತರ ಕಾಲದ ಅನುಪಮ ನಿರ್ಮಾಣವಾಗಿದೆ

49. ಗುಪ್ತರ ಕಾಲದಲ್ಲಿ ಬಂಡೆಯನ್ನು ಕೊರೆದು ಮಾಡಿದ ಬೌದ್ಧ ವಿಹಾರ ಮತ್ತು ಗುಹಾಲಯಗಳು ಅಜಂತಾ ಮತ್ತು ಎಲ್ಲೋರಾ ಎಂಬಲ್ಲಿವೆ.

50. ಗುಪ್ತ ಯುಗದ ಮಹಾನ್ ಗಣಿತಶಾಸ್ತ್ರಜ್ಞ - ಆರ್ಯಭಟ

- ಈತನ ಗ್ರಂಥ - ಆರ್ಯಭಟೀಯ

51. ಬ್ರಹ್ಮಗುಪ್ತ ಆ ಕಾಲದ ಇನ್ನೊಬ್ಬ ಗಣಿತ ವಿದ್ವಾಂಸ

- ಶ್ರೇಷ್ಠ ಖಗೋಳಶಾಸ್ತ್ರಜ್ಞ ವರಾಹಮಿಹಿರನು ಇದೇ ಕಾಲದವನು.

52. ಗುಪ್ತರ ಕಾಲದಲ್ಲಿ ಲೋಹ ವಿಜ್ಞಾನವು ಗಣನೀಯ ಮುನ್ನಡೆ ಸಾಧಿಸಿತು. ದೆಹಲಿಯ ಸಮೀಪ ಮೆಹರೌಲಿ ಎಂಬಲ್ಲಿನ ಕಬ್ಬಿಣದ ಕಂಬವು ಇದಕ್ಕೊಂದು ಉದಾಹರಣೆ.

53. ಗುಪ್ತರ ಕಾಲದ ವಾಗ್ಭಟನು ಚರಕ ಸಂಹಿತೆಯ ಸಾರವನ್ನು ಸಿದ್ಧಪಡಿಸಿದನು. ಅದುವೇ `ಅಷ್ಟಾಂಗ ಸಂಗ್ರಹ'. ಇದು ಆಯುರ್ವೇದದ ಪ್ರಮುಖ ಶಾಸ್ತ್ರಗ್ರಂಥವಾಗಿದ್ದು ಇಂದಿಗೂ ರೂಢಿಯಲ್ಲಿದೆ.



Scanned with OKEN Scanner

Navachethana education YouTube & telegram channel Copy Rights Reserved

- ಪ್ರಾಚೀನ ಭಾರತದಲ್ಲಿ ಶಸ್ತ್ರಚಿಕಿತ್ಸೆಯೂ ಸಾಕಷ್ಟು ಪ್ರಗತಿ ಹೊಂದಿತ್ತು. ಶಸ್ತ್ರಚಿಕಿತ್ಸಕರು 127 ಬಗೆಯ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಬಳಸುತ್ತಿದ್ದರು.
- ದೇಹದೊಳಗೆ ಸೇರಿಕೊಂಡ ಕಬ್ಬಿಣ, ಕಲ್ಲುಗಳನ್ನು ಹೊರತೆಗೆಯುತ್ತಿದ್ದರು. ಪಾದರಸವನ್ನು ಔಷಧಿಯಾಗಿ ಮೊದಲ ಬಾರಿಗೆ ಬಳಕೆಗೆ ತಂದ ಕೀರ್ತಿ ಭಾರತೀಯ ವೈದ್ಯರಿಗೆ ಸಲ್ಲುತ್ತದೆ.

54. ವರ್ಧನ ವಂಶದ ಸ್ಥಾಪಕ - ಪುಷ್ಯಭೂತಿ

55 ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿರಿ

1. ಹರ್ಷವರ್ಧನನು ಪಂಡಿತರಿಗೆ ಆಶ್ರಯ ನೀಡಿದನು. ಅವರಲ್ಲಿ ಬಾಣಭಟ್ಟ ಪ್ರಮುಖನು ☑
2. ಈತನ 'ಹರ್ಷಚರಿತ' ಎಂಬ ಕೃತಿಯು ಹರ್ಷವರ್ಧನನ ಕುರಿತಾಗಿದೆ. 'ಕಾದಂಬರಿ' ಬಾಣಭಟ್ಟನ ಇನ್ನೊಂದು ಕೃತಿ ☑
3. ಹರ್ಷವರ್ಧನನೇ ಸ್ವತಃ 'ಪ್ರಿಯದರ್ಶಿಕಾ', 'ರತ್ನಾವಳಿ' ಮತ್ತು 'ನಾಗಾನಂದ' ಎಂಬ ಮೂರು ನಾಟಕಗಳನ್ನು ರಚಿಸಿದನು ☑
4. ಹರ್ಷವರ್ಧನನು ನಲಂದಾ ವಿಶ್ವವಿದ್ಯಾಲಯಕ್ಕೆ ಉದಾರ ದತ್ತಿಗಳನ್ನು ನೀಡಿದನು. ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

56. ಹರ್ಷವರ್ಧನನು ತನ್ನ ರಾಜಧಾನಿಯಾದ ಕನ್‌ಜ್ ಮತ್ತು ಪ್ರಯೋಗದಲ್ಲಿ ಧರ್ಮ ಸಮ್ಮೇಳನಗಳನ್ನು ಐದು ವರ್ಷಗಳಿಗೊಮ್ಮೆ ನಡೆಸುತ್ತಿದ್ದನು

57. ಹರ್ಷವರ್ಧನ ಆಸ್ಥಾನಕ್ಕೆ ಭೇಟಿ ನೀಡಿದ್ದ ಚೀನಿ ಪ್ರವಾಸಿ ಯಾತ್ರಿಕ

- ಹುಯೆನ್ ತ್ಸಾಂಗ್



Scanned with OKEN Scanner

Navachethana education YouTube & telegram channel Copy Rights Reserved

- ಭಾರತ ದೇಶ ಸಂಚಾರ ಮಾಡಿ ಬೌದ್ಧ ಸಾಹಿತ್ಯದ ಅಧ್ಯಯನ ನಡೆಸಿದ. 'ಸಿಯುಕಿ ( ಪಶ್ಚಿಮದ ಭೂಮಿಯ ಕಥನ ) ಎಂಬ ತನ್ನ ಗ್ರಂಥದಲ್ಲಿ ಆತನು ಭಾರತ ಪ್ರವಾಸದ ವಿವರವನ್ನು ನೀಡಿದ್ದಾನೆ.

58. ಬಿಹಾರ ರಾಜ್ಯದಲ್ಲಿರುವ ನಲಂದಾ ವಿಹಾರವು ಆರು ಶತಮಾನಗಳಿಗೂ ಹೆಚ್ಚು ಕಾಲ ಜಗತ್ಪಸಿದ್ಧಿ ಪಡೆದಿತ್ತು. ಅಧ್ಯಯನಕ್ಕಾಗಿ ಜಪಾನ್, ಚೀನಾ ಮುಂತಾದ ವಿದೇಶಗಳಿಂದ ಸಾವಿರಾರು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರು.

NAVACHETANA EDUCATIONS
7019752139



Scanned with OKEN Scanner

Navachethana education YouTube & telegram channel Copy Rights Reserved

## 5. ದಕ್ಷಿಣ ಭಾರತದ ಪ್ರಾಚೀನ ರಾಜವಂಶಗಳು

1. 'ಶಿಲಪ್ಪದಿಗಾರಂ' ಎಂಬ ಪ್ರಾಚೀನ ತಮಿಳ್ ಮಹಾಕಾವ್ಯದ ಕಥಾನಾಯಕಿ

   - ಕಣ್ಣಗಿ

2. 'ಮಣಿ ಮೇಗಿಲೈ ' ತಮಿಳರ ಇನ್ನೊಂದು ಮಹಾಕಾವ್ಯ ಇದರ ಕಥಾನಾಯಕಿ

   - ಮಣಿಮೇಗಲೆ

3. 'ತಿರುಕ್ಕುರಳ್'ನ್ನು ರಚಿಸಿದವರು - ತಿರುವಳ್ಳುವರ್

   - "ಎಲ್ಲ ಮಾನವರು ಹುಟ್ಟಿನಿಂದ ಒಂದೇ" - ತಿರುವಳ್ಳುವರ್

4. ಸಂಗಂ ಯುಗದ ಪದಗಳ ಅರ್ಥ

'ತಿರು' ಎಂದರೆ 'ಶ್ರೀ

'ಕುರಳ್' ಎಂಬುದರ ಅರ್ಥ 'ಚಿಕ್ಕದು'

- 'ಕುರಳ್' ಕೇವಲ ಒಂದೂವರೆ ಸಾಲಿನ ಪದ್ಯ ಅದರಲ್ಲಿ ಅರ್ಥ ಹಿಂದಾದದ್ದು

5. ಕುರಳ್ ಕುರಿತು, "ಸಾಸಿವೆಯನ್ನು ಕೊರೆದು ಟೊಳ್ಳು ಮಾಡಿ ಅದರೊಳಗೆ ಸಪ್ತಸಾಗರಗಳನ್ನು ಅಡಗಿಸಿದಂತೆ" ಎಂದು ಹೇಳಲಾಗಿದೆ.

6. ಶಿಲಪ್ಪದಿಗಾರಂ. ಮಣಿಮೇಗಿಲೆ ಮತ್ತು 'ತಿರುಕ್ಕುರಳ್" ಇವುಗಳಲ್ಲದೆ ಪ್ರಾಚೀನ ಕಾಲಕ್ಕೆ ಸೇರಿದ ಇನ್ನೂ ಕೆಲವು ಸಾಹಿತ್ಯ ಕೃತಿಗಳಿವೆ. ಇವನ್ನೆಲ್ಲಾ ಒಟ್ಟಾಗಿ 'ಸಂಗಂ ಸಾಹಿತ್ಯ' ಎನ್ನುವರು.

7. ಮಧುರೆಯ ಪಾಂಡ್ಯ ದೊರೆಗಳು ತಮ್ಮ ರಾಜಧಾನಿ ಮಧುರೆಯಲ್ಲಿ - ತಮಿಳ್ ಸಂಗಂ



Scanned with OKEN Scanner

Navachethana education YouTube & telegram channel Copy Rights Reserved

(ತಮಿಳು ಸಾಹಿತ್ಯ ಸಂಘ ) ಸ್ಥಾಪಿಸಿ ಕವಿಗಳಿಗೆ ಆಶ್ರಯ ಕೊಟ್ಟಿದ್ದರು, ಕವಿಗಳು ತಮ್ಮ ಕೃತಿಗಳನ್ನು ಪರಿಶೀಲನೆಗಾಗಿ ಸಂಘಕ್ಕೆ ಒಪ್ಪಿಸುವ ಪರಿಪಾಠವಿತ್ತು.

8. ಸಂಗಂ ಸಾಹಿತ್ಯ ರಚನೆ ಸುಮಾರು ಐದು ಶತಮಾನಗಳ ಕಾಲ ಮುಂದುವರಿಯಿತು. ಈ ಕಾಲಾವಧಿಯನ್ನು 'ಸಂಗಂ ಯುಗ' ಎನ್ನುವರು

9.ಸಂಗಂ ಸಾಹಿತ್ಯ ಕೃತಿಗಳಲ್ಲಿ ಅಂದಿನ ಅರಸು ಮನೆತನಗಳಾದ ಚೋಳ, ಚೇರ ಮತ್ತು ಪಾಂಡ್ಯ ರಾಜರ ಆಳ್ವಿಕೆ ಮತ್ತು ಆ ಕಾಲದ ಜನಜೀವನದ ವರ್ಣನೆಯಿದೆ.

10. ಶಾತವಾಹನ ರಾಜ್ಯದ ಸ್ಥಾಪಕ - ಸಿಮುಖ

11. ಈ ಕೆಳಗಿನ ಹೇಳಿಕೆಯನ್ನು ಗಮನಿಸಿ

1. ಈತನು ವಿದೇಶಿ ಆಳರಸರನ್ನು ಸೋಲಿಸಿ ಅವರ ವಿಸ್ತಾರವಾದ ರಾಜ್ಯವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು.
2. ಕರ್ನಾಟಕದ ಕೆಲ ಭಾಗಗಳು ಕೂಡ ಅವನ ಕೈಕೆಳಗಿದ್ದವು.
3. ನಾಸಿಕ ಎಂಬಲ್ಲಿ ದೊರಕಿದ ಶಾಸನದಲ್ಲಿ ಈತನು ಸುಂದರ ಪುರುಷನು. ಉತ್ತಮ ಗುಣದವನು. ದುರ್ಬಲರ ಬಗ್ಗೆ ವಿಶೇಷ ಕಾಳಜಿಯುಳ್ಳವನೆಂದು ವರ್ಣಿಸಲಾಗಿದೆ.
4. ವೈದಿಕಧರ್ಮ ಸಂಪ್ರದಾಯವನ್ನು ಮತ್ತೆ ಬಳಕೆಗೆ ತಂದನು, ಈತನು ಅನ್ಯಮತ ಸಹಿಷ್ಣುವಾಗಿದ್ದನು.

ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

- ಗೌತಮಿಪುತ್ರ ಶಾತಕರ್ಣಿ

12. ಶಾತವಾಹನರ ಕಾಲದಲ್ಲಿ ಚೈತ್ಯ, ವಿಹಾರ ಮತ್ತು ಸ್ತೂಪಗಳು ರಚನೆಯಾದವು.

- ಚೈತ್ಯ ಎಂದರೆ – ಬೌದ್ಧರ ಪ್ರಾರ್ಥನಾ ಮಂದಿರ
- ವಿಹಾರ ಎಂದರೆ - ಬೌದ್ಧ ಬಿಕ್ಷುಗಳು ವಾಸಿಸುವ ತಾಣ.





Scanned with OKEN Scanner

Navachethana education YouTube & telegram channel Copy Rights Reserved

- ಶಾತವಾಹನ ಕಾಲದ ಚೈತ್ಯಗಳು - ಕಾರ್ಲೆ, ಕನ್ಹೇರಿ
- ಆಂಧ್ರಪ್ರದೇಶದ ಅಮರಾವತಿಯ ಅಮೃತಶಿಲೆಯ ಸ್ತೂಪವು ಕಲಾತ್ಮಕವಾಗಿದೆ.

13. ಕರ್ನಾಟಕದಲ್ಲಿ ಶಾತವಾಹನರ ರಚನೆಗಳ ಆವಶೇಷಗಳನ್ನು ಎಲ್ಲಿ ಕಾಣಬಹುದು

- ಗುಲ್ಬರ್ಗ ಜಿಲ್ಲೆಯ ಸನ್ನತಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಕಾಣಬಹುದು.

14. ಶಾತವಾಹನ ಸಾಮ್ರಾಜ್ಯದ ಹಲವು ಪಟ್ಟಣಗಳು ವ್ಯಾಪಾರಿ ಕೇಂದ್ರಗಳಾಗಿದ್ದವು. ಇಂಥ ಪಟ್ಟಣಗಳನ್ನು "ನಿಗಮಗಳು" ಎನ್ನುತ್ತಿದ್ದರು.

- ಶತವಾಹನರ ಕಾಲದಲ್ಲಿ ಪ್ರಾಕೃತವು ಜನಪ್ರಿಯ ಭಾಷೆಯಾಗಿತ್ತು.

15. ಶಾತವಾನರ ಕಾಲದಲ್ಲಿ ನಿಗಮಗಳು

- ಮಹಾರಾಷ್ಟ್ರದ ಪೈಠಾಣ, ಕಾರ್ಲೆ, ಕನ್ಹೇರಿ, ಜುನ್ನಾರ್ ಮತ್ತು ನಾಸಿಕ್, ಆಂಧ್ರಪ್ರದೇಶದ ಧಾನ್ಯಕಟಕ (ಧರಣೀಕೋಟೆ ) ಮತ್ತು ಉತ್ತರ ಕನ್ನಡ ಜಿಲ್ಲೆಯ ವೈಜಯಂತಿ ( ಬನವಾಸಿ ) ನಿಗಮಗಳಾಗಿದ್ದವು.

16. ಶಾತವಾಹನರ ಕಾಲದಲ್ಲಿ ವ್ಯಾಪಾರಿಗಳು ತಮ್ಮ ಹಿತ ರಕ್ಷಣೆಗಾಗಿ ಕಟ್ಟಿಕೊಂಡ ಸಂಘ - ' ಶ್ರೇಣಿ '

17. ಶಾತವಾಹನರ ಕಾಲದ ಬಂದರು - ಭರುಕಟ್ಟೆ (ಈಗಿನ ಬ್ರೋಚ್ ), ಸೊಪಾರಾ, ಕಲ್ಯಾಣ

18. ಶಾತವಾಹನರ ಕಾಲದಲ್ಲಿ ಯುರೋಪಿನ ರೋಮನ್ ಸಾಮ್ರಾಜ್ಯದೊಡನೆ ಭಾರತದ ವಾಣಿಜ್ಯ ಸಂಬಂಧವು ಉತ್ತಮವಾಗಿತ್ತು.

19. ಕದಂಬ ವಂಶದ ಸ್ಥಾಪಕ - ಮಯೂರಶರ್ಮ,

- ಅವನ ಮನೆಯ ಬಳಿ ಕದಂಬ ವೃಕ್ಷವಿದ್ದ ಕಾರಣ ಅವನ ವಂಶ ಕದಂಬ' ಎಂದಾಯಿತು



Scanned with OKEN Scanner

**Navachethana education YouTube & telegram channel Copy Rights Reserved**

- ಕದಂಬರ ರಾಜಧಾನಿ - ಉತ್ತರ ಕನ್ನಡ ಜಿಲ್ಲೆಯ ಬನವಾಸಿ
- ಲಾಂಛನ ಸಿಂಹ.

**20.. ಕದಂಬರ ಕಾಲದಲ್ಲಿ ಯಾವವ ಭಾಷೆಗಳು ಪ್ರಚಲಿತದಲ್ಲಿದ್ದವು**

- ಕದಂಬರ ಕಾಲದಲ್ಲಿ ಪಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳು ಪ್ರಚಲಿತದಲ್ಲಿದ್ದವು

**21. ಕದಂಬರ ಕಾಲದ ಆಸ್ಥಾನದ ಭಾಷೆ - ಸಂಸ್ಕೃತ**

**22.ಕರ್ನಾಟಕದಲ್ಲಿ ದೊರೆತಿರುವ ಪ್ರಥಮ ಸಂಸ್ಕೃತ ಶಾಸನ- ತಾಳಗುಂದ ಶಾಸನ**

**23. ಕರ್ನಾಟಕದ ಅತಿ ಪ್ರಾಚೀನ ಸಂಸ್ಕೃತ ಕವಿ - ಕುಬ್ಜ**

**24. ಕದಂಬರ ಕಾಲದ ಮುಖ್ಯ ದೇವಾಲಯ ಯಾವುದು - ಮಧುಕೇಶ್ವರ ದೇವಾಲಯ, ಬನವಾಸಿ**

**25.ಗಂಗ ರಾಜ್ಯದ ಸ್ಥಾಪಕ – ದಡಿಗ**

**26.ಶ್ರವಣಬೆಳಗೊಳದ ಏಕಶಿಲಾಬೆಟ್ಟ ಗೊಮ್ಮಟೇಶ್ವರ (ಬಾಹುಬಲಿ ) ಮೂರ್ತಿಯನ್ನು ನಿರ್ಮಿಸಿದವರು - ಚಾವುಂಡರಾಯ**

- ಗೊಮ್ಮಟೇಶ್ವರ ವಿಗ್ರಹದ ಶಿಲ್ಪಿ- ಅರಿಷ್ಟನೇಮಿ.

**27.4ನೇ ರಾಚಮಲ್ಲನ ಪ್ರಧಾನ ಮಂತ್ರಿ - ಚಾವುಂಡರಾಯ**

**28.ದೊಡ್ಡ ಬೆಟ್ಟದ ಮೇಲೆ ಇರುವ ಗುಳ್ಳಕಾಯಜ್ಜಿಯ ಪ್ರತಿಮೆಯನ್ನು ಚಾವುಂಡರಾಯ ನಿರ್ಮಾಣ ಮಾಡಿಸಿದನು**

**29. ದುರ್ವಿನೀತನು ಗಂಗ ರಾಜರಲ್ಲಿ ಶ್ರೇಷ್ಠನು, ಶಾಸನಗಳಲ್ಲಿ ಆತನನ್ನು ಶ್ರೀಕೃಷ್ಣನಿಗೆ ಸಮಾನನೆಂದು ವರ್ಣಿಸಲಾಗಿದೆ.**



Scanned with OKEN Scanner

Navachethana education YouTube & telegram channel Copy Rights Reserved

30. ಗಂಗರ ಆಳ್ವಿಕೆಯ ಕಾಲದಲ್ಲಿ ಸಂಸ್ಕೃತ, ಪಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಸಾಕಷ್ಟು ಸಾಹಿತ್ಯ ರಚನೆಯಾಯಿತು.

31.ಚಾವುಂಡರಾಯನು 'ಚಾವುಂಡರಾಯ ಪುರಾಣ' ಎಂಬ ಕೃತಿಯನ್ನು ರಚಿಸಿದನು. ಇದು ಕನ್ನಡ ಗದ್ಯಸಾಹಿತ್ಯದಲ್ಲಿ ಒಂದು ಪ್ರಮುಖ ಕೃತಿಯಾಗಿದೆ.

32.ಬಾದಾಮಿ ಚಾಳುಕ್ಯ ರಾಜ್ಯವನ್ನು ಸ್ಥಾಪಿಸಿದವರು – ಜಯಸಿಂಹ

- ರಾಜಧಾನಿ - ವಾತಾಪಿ
- ಲಾಂಛನ - ವರಾಹ

33.ಉತ್ತರ ಭಾರತವನ್ನು ಆಳುತ್ತಿದ್ದ ಹರ್ಷವರ್ಧನನ್ನು ನರ್ಮದಾ ನದಿಯ ದಂಡೆಯಲ್ಲಿ ತಡೆಗಟ್ಟಿ ಸೋಲಿಸಿ 'ದಕ್ಷಿಣಾಪಥೇಶ್ವರ', 'ತ್ರಿಸಾಗರಗಳಿಂದಾವೃತವಾದ ಪ್ರದೇಶದ ಅಧಿಪತಿ ಎಂಬ ಬಿರುದು ಪಡೆದವರು - ಇಮ್ಮಡಿಪುಲಿಕೇಶಿ

34. ಪುಲಿಕೇಶಿಯ ಕೀರ್ತಿಯು ಭಾರತದ ಹೊರಗೂ ವ್ಯಾಪಿಸಿತ್ತು.ಅವನು ಪರ್ಷಿಯ ದೇಶದ ರಾಜನಾದ ಖುಸ್ರುವಿನಲ್ಲಿಗೆ ನಿಯೋಗವೊಂದನ್ನು ಕಳುಹಿಸಿ ಅಮೂಲ್ಯ ವಸ್ತುಗಳನ್ನೂ ಒಂದು ಉತ್ತಮ ಆನೆಯನ್ನೂ ಉಡುಗೊರೆಯಾಗಿ ನೀಡಿದ್ದನು

35.ಖುಸ್ರುವು ಒಂದು ಮಿತ್ರ ನಿಯೋಗವನ್ನು ಪುಲಕೇಶಿ ಆಸ್ಥಾನಕ್ಕೆ ಕಳಿಸಿದನು

36. ಅಜಂತದ ಗುಹೆಯೊಂದರಲ್ಲಿ ಖುಸ್ರುವೂ ಅವನ ರಾಣಿಯೂ ಪುಲಿಕೇಶಿಯ ರಾಯಭಾರಿಯನ್ನು ಸ್ವಾಗತಿಸುವ ವರ್ಣರಂಜಿತ ಭಿತ್ತಿಚಿತ್ರವಿದೆ.

37. ಚಾಳುಕ್ಯರ ಮುಖ್ಯ ವಾಸ್ತುಶಿಲ್ಪಗಳು ಇರುವ ಮೂರು ಸ್ಥಳ - ಬಾದಾಮಿ, ಐಹೊಳೆ, ಪಟ್ಟದಕಲ್ಲು

38.ಯಾವ ಸ್ಥಳವನ್ನು 'ದೇವಾಲಯಗಳ ಶಿಲ್ಪದ ತೊಟ್ಟಿಲು' ಎಂದು ಕರೆಯಲಾಗುತ್ತದೆ?



Scanned with OKEN Scanner

Navachethana education YouTube & telegram channel Copy Rights Reserved

- ಐಹೊಳೆ

39.ನಟರಾಜ ಮತ್ತು ವಿಷ್ಣುವಿನ ಉಬ್ಬು ಶಿಲ್ಪಗಳು ಇಲ್ಲಿ ಕಂಡುಬರುವ ಸ್ಥಳ

- ಬಾದಾಮಿ

40. ಪಟ್ಟದಕಲ್ಲಿನ ದೇವಾಲಯಗಳಲ್ಲಿ ವಿರೂಪಾಕ್ಷ ದೇವಾಲಯವು ಸುಂದರವಾಗಿದ್ದು, ಗಾತ್ರದಲ್ಲಿ ದೊಡ್ಡದಾಗಿದೆ. ಪಟ್ಟದಕಲ್ಲು ವಿಶ್ವಪರಂಪರೆಗೆ ಸೇರಿದ ತಾಣವಾಗಿದೆ.

41 ಕರ್ನಾಟಕದಲ್ಲಿ ಹಂಪಿ ಮತ್ತು ಪಟ್ಟದಕಲ್ಲು ವಿಶ್ವಪರಂಪರೆಯ ತಾಣಗಳು.

42.ಯಾರು ಚಾಲುಕ್ಯ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಇಮ್ಮಡಿ ಪುಲಿಕೇಶಿಯನ್ನು ಸೋಲಿಸಿ ಬಾದಾಮಿಯನ್ನು ಗೆದ್ದುಕೊಂಡನು. ಈ ವಿಜಯದ ಸಂಕೇತವಾಗಿ 'ವಾತಾಪಿಕೊಂಡ' ಎಂಬ ಬಿರುದನ್ನು ಧರಿಸಿದನು - ನರಸಿಂಹವರ್ಮ

43. ನರಸಿಂಹವರ್ಮನು ಮಾಮಲ್ಲಪುರ (ಈಗಿನ ಮಹಾಬಲಿಪುರಂ)
ರೇವು ಪಟ್ಟಣವನ್ನು ಸುಂದರ ನಗರವನ್ನಾಗಿ ಅಭಿವೃದ್ಧಿಗೊಳಿಸಿದನು.

44. ಒಂದನೇ ನರಸಿಂಹ ವರ್ಮನು ಮಹಾಬಲಿಪುರಂನಲ್ಲಿ ಒಂದೇ ಶಿಲೆಯಲ್ಲಿ 8 ಕಲ್ಲಿನ ರಥಗಳನ್ನು ನಿರ್ಮಿಸಿದ್ದಾನೆ.

45. ಗಂಗಾವತರಣ' ಎಂಬ ಉಬ್ಬು ಶಿಲ್ಪ ಇರುವ ಸ್ಥಳ - ಮಹಾಬಲಿಪುರಂ

46. ಕವಿರಾಜ ಮಾರ್ಗವನ್ನು ರಚಿಸಿದವರು ಯಾರು - ಶ್ರೀ ವಿಜಯ

47. 'ವಿಕ್ರಮಾರ್ಜುನ ವಿಜಯ' ಪಂಪನ ಮಹಾಕಾವ್ಯ. ಇದು 'ಪಂಪಭಾರತ'ವೆಂದು ವಿಖ್ಯಾತವಾಗಿದೆ.



Scanned with OKEN Scanner

Navachethana education YouTube & telegram channel Copy Rights Reserved

48. ಪಂಪನು ಯಾರ ಆಸ್ಥಾನದಲ್ಲಿದ್ದನು - ಅರಿಕೇಸರಿ

49. ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಕನ್ನಡದ ಮೊದಲ ಮಹಾಕವಿ - ಪೊನ್ನಾ

50. ಎಲ್ಲೋರದ ಕೈಲಾಸ ದೇವಾಲಯವನ್ನು ನಿರ್ಮಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ

- 1ನೇ ಕೃಷ್ಣ

51. ಮೂರನೆಯ ಗೋವಿಂದ ಸಾಧನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡಿ

1.ಮೂರನೆಯ ಗೋವಿಂದನು ರಾಷ್ಟ್ರಕೂಟ ಸಾಮ್ರಾಟರಲ್ಲಿ ಅತಿ ಗಣ್ಯನು, ಇವನು ದಕ್ಷಿಣ ಭಾರತದ ಎಲ್ಲೆಡೆ ಪ್ರಭುತ್ವ ಸಾಧಿಸಿದನು. ಮುಂದೆ ಹಿಮಾಲಯದ ತಪ್ಪಲಿನವರೆಗೂ ತನ್ನ ಸೈನ್ಯದೊಂದಿಗೆ ಜಯಭೇರಿ ಬಾರಿಸುತ್ತ ಮುನ್ನಡೆದನು.☑

2. ಈ ಮಹತ್ಸಾಧನೆಯನ್ನು ಅವನ ಆಸ್ಥಾನ ಕವಿಯು "ಗೋವಿಂದನ ಯುದ್ಧದ ಮದ್ದಾನೆಗಳು ಗಂಗಾನದಿಯ ಪುಣ್ಯತೀರ್ಥದ ರುಚಿ ನೋಡಿದವು" ಎಂಬುದಾಗಿ ಮನಮೋಹಕವಾಗಿ ವರ್ಣಿಸಿದ್ದಾನೆ.☑

1 & 2 ಎರಡೂ ಸರಿ

52. ಯಾರು ಅಮೋಘವರ್ಷನನ್ನು ಕುರಿತು "ಜಗತ್ತಿನ ನಾಲ್ವರು ಪ್ರಬಲ ಚಕ್ರವರ್ತಿಗಳಲ್ಲಿ ಒಬ್ಬನೆಂದಿದ್ದಾನೆ" - ಸುಲೈಮಾನ್

53. ಕವಿ ಪೊನ್ನ ಯಾರ ಆಶ್ರಯದಲ್ಲಿದ್ದನು - 3ನೇ ಕೃಷ್ಣ



Scanned with OKEN Scanner

Navachethana education YouTube & telegram channel Copy Rights Reserved

54. ಯಾರು ಬೀದರ್ ಜಿಲ್ಲೆಯ ಬಸವ ಕಲ್ಯಾಣವನ್ನು ರಾಜಧಾನಿ ಮಾಡಿಕೊಂಡು ಅಧಿಕಾರಕ್ಕೆ ಬಂದರು – ಕಲ್ಯಾಣ ಚಾಳುಕ್ಯರು

55.ಯಾರು ಅಧಿಕಾರಕ್ಕೆ ಬಂದ ನೆನಪಿಗಾಗಿ "ಚಾಳುಕ್ಯ ವಿಕ್ರಮ ಶಕೆ' ಯನ್ನು ಆರಂಭಿಸಿದನು - 6ನೇ ವಿಕ್ರಮಾದಿತ್ಯ

56. ಪಂಡಿತ ಬಿಲ್ಹಣನು ರಚನೆಮಾಡಿರುವ ಮಹಾಕಾವ್ಯ - ವಿಕ್ರಮಾಂಕದೇವಚರಿತ

57. ವಿಜ್ಞಾನೇಶ್ವರನು ಬರೆದ ಕಾನೂನು ಗ್ರಂಥ - ಮಿತಾಕ್ಷರ ಸಂಹಿತೆ

58. ಯಾವ ಗ್ರಂಥವು ಹಿಂದೂ ಕಾನೂನು ಪದ್ಧತಿಯ ಪ್ರಮಾಣ ಗ್ರಂಥವೆಂದು ಮನ್ನಣೆ ಪಡೆದಿದೆ - ಮಿತಾಕ್ಷರ ಸಂಹಿತೆ

59. ಮಾನಸೋಲ್ಲಾಸ ಎಂಬ ಕೃತಿಯು ಸಂಸ್ಕೃತ ವಿಶ್ವಕೋಶವೆನಿಸಿದೆ ಇದನ್ನು ಬರೆದವರು - 3ನೆಯ ಸೋಮೇಶ್ವರ

60. ಕನ್ನಡ ಕವಿ ರನ್ನ ಬರೆದ ಪ್ರಮುಖ ಕೃತಿಗಳು – 'ಗದಾಯುದ್ಧ'(ಸಾಹಸಭೀಮ ವಿಜಯ ) ಅಜಿತನಾಥ ಪುರಾಣ

61. ಪಂಪ, ಪೊನ್ನ ಮತ್ತು ರನ್ನರನ್ನು ಕನ್ನಡ ಸಾಹಿತ್ಯದ ರತ್ನತ್ರಯರೆಂದು ಕರೆಯುತ್ತಾರೆ.

62. ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು , ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಯ್ಯ ಇವರು ಕಲ್ಯಾಣ ಚಾಳುಕ್ಯರ ಕಾಲದ ಪ್ರಮುಖ ವಚನಕಾರರು.

63. ದೇವಾಲಯಗಳ ಚಕ್ರವರ್ತಿ' ಎಂದು ಹೆಸರಾದ ದೇವಾಲಯ - ಇಟಗಿಯ ಮಹಾದೇವ ದೇವಾಲಯ

64. ಹೊಯ್ಸಳ ರಾಜ್ಯದ ಸ್ಥಾಪಕ – ಸಳ(ನೃಪಕಾಮ)



Scanned with OKEN Scanner

Navachethana education YouTube & telegram channel Copy Rights Reserved

- ಹೊಯ್ಸಳರ ರಾಜಧಾನಿ - ದ್ವಾರಸಮುದ್ರ

65. ತಲಕಾಡುವಿಜಯದ ನೆನಪಿಗಾಗಿ ವಿಷ್ಣುವರ್ಧನ ನಿರ್ಮಿಸಿದ ದೇವಾಲಯ

- ಬೇಲೂರಿನ ವಿಜಯನಾರಾಯಣ (ಚನ್ನಕೇಶವ) ದೇವಾಲಯ

66. ಹೊಯ್ಸಳರು ದೇವಾಲಯ ನಿರ್ಮಾಣಕ್ಕೆ ಬಳಸಿದ್ದು – ಬಳಪದ ಮೃದುಕಲ್ಲು

67. ಹೊಯ್ಸಳರ ದೇವಾಲಯಗಳ ಗರ್ಭಗೃಹದ ಆಕಾರ - ನಕ್ಷತ್ರಾಕಾರ

68. 3ನೇ ಬಲ್ಲಾಳನು ಹೊಯ್ಸಳ ವಂಶದ ಕೊನೆಯ ಪ್ರಮುಖ ಅರಸ ಅವನು 50 ವರ್ಷಗಳ ಕಾಲ ಸುಧೀರ್ಘ ಆಳ್ವಿಕೆ ನಡೆಸಿದ ಅವನ ಕಾಲದಲ್ಲಿ ಯಾರು ಮೇಲಿಂದ ಮೇಲೆ ದಕ್ಷಿಣ ಭಾರತ ಮೇಲೆ ದಂಡೆತ್ತಿ ಬಂದರು - ದಿಲ್ಲಿಯ ಸುಲ್ತಾನರು

69 ಹೊಯ್ಸಳರ ಕಾಲದ ಶ್ರೇಷ್ಠ ಕವಿಗಳು - ಜನ್ನ, ಹರಿಹರ ಮತ್ತು ರಾಘವಾಂಕ

70. ಆಂಡಯ್ಯನು ಅಚ್ಚಕನ್ನಡದಲ್ಲಿ ರಚಿಸಿದ ಕೃತಿ - ಕಬ್ಬಿಗರ ಕಾವಂ

- ಜನ್ನ- ಯಶೋಧರ ಚರಿತ
- ಹರಿಹರ - 'ಗಿರಿಜಾ ಕಲ್ಯಾಣ'
- ರಾಘವಾಂಕ - ಹರಿಶ್ಚಂದ್ರ ಕಾವ್ಯ

71. ಭಾರತದಲ್ಲಿಯೇ ಎತ್ತರದ ಹಾಗೂ ಗಾತ್ರದಲ್ಲಿ ಅತಿ ದೊಡ್ಡದಾದ ದೇವಾಲಯ - ಬೃಹದೀಶ್ವರ ದೇವಾಲಯ (ತಂಜಾವೂರು)



Scanned with OKEN Scanner

Navachethana education YouTube & telegram channel Copy Rights Reserved

72. ಈ ಕೆಳಗಿನ ಹೇಳಿಕೆಯನ್ನು ಗಮನಿಸಿ

1. ಇವನು ಪರಾಕ್ರಮಿ ಹಾಗೂ ದಕ್ಷ ಆಡಳಿತಗಾರನಾಗಿದ್ದನು
2. ವಿಶಾಲವಾಗಿದ್ದ ಅವನ ಸಾಮ್ರಾಜ್ಯವು ತುಂಗಭದ್ರಾ ನದಿಯ ದಕ್ಷಿಣದ ಎಲ್ಲಾ ಪ್ರದೇಶಗಳು, ಶ್ರೀಲಂಕಾ ಮತ್ತು ಮಾಲ್ದೀವ್ ದ್ವೀಪಗಳನ್ನು ಒಳಗೊಂಡಿತ್ತು.
3. ಸಾಮ್ರಾಜ್ಯದ ರಕ್ಷಣೆಗಾಗಿ ಪ್ರಬಲವಾದ ಭೂಸೇನೆ ಮತ್ತು ನೌಕಾದಳವನ್ನು ಇವನು ಕಟ್ಟಿದು,
4. ಬೃಹದೀಶ್ವರ ದೇವಾಲಯವು ಇವನ ಕೊಡುಗೆಯಾಗಿದೆ.

ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

- ರಾಜರಾಜ ಚೋಳ

73. ಗಂಗೈಕೊಂಡ ಚೋಳಪುಂ' ಎಂಬ ಹೆಸರಿನ ಹೊಸ ರಾಜಧಾನಿಯ ನಿರ್ಮಾತೃ –

ಒಂದನೇ ರಾಜೇಂದ್ರ ಚೋಳ

74. ಗಂಗೈಕೊಂಡ ಚೋಳ ಎಂಬ ಬಿರುದು ಹೊಂದಿದ ಚೋಳ ದೊರೆ

- 1ನೇ ರಾಜೇಂದ್ರ

75. ಚೋಳರ ಆಳ್ವಿಕೆಯ ಕಾಲವು ಗ್ರಾಮಾಡಳಿತಕ್ಕೆ ಹೆಸರಾಗಿತ್ತು

76. ಚೋಳ ಸಾಮ್ರಾಜ್ಯವು ಸಂಪದ್ಭರಿತವಾಗಿತ್ತು ವಿದೇಶಿ ವ್ಯಾಪಾರವು ಬಿರುಸಾಗಿ ನಡೆಯುತ್ತಿತ್ತು. ಚೀನ, ಸುಮಾತ್ರಾ, ಜಾವಾ ಮತ್ತು ಅರೇಬಿಯ ಮುಂತಾದ ಪ್ರದೇಶಗಳೊಡನೆ ಸಾಮ್ರಾಜ್ಯವು ವ್ಯಾಪಾರ ಸಂಬಂಧವನ್ನಿರಿಸಿಕೊಂಡಿತ್ತು.

NAVACHETANA EDUCATIONS
7019752139



Scanned with OKEN Scanner

# ಗ್ಲೋಬ್ ಮತ್ತು ನಕಾಶೆಗಳು

- ಭೂಮಿಯ ಆಕಾರ ಮತ್ತು ಗಾತ್ರಗಳನ್ನು ಕುರಿತು ಅಧ್ಯಯನ ಮಾಡಿದ್ದೀರಿ. ಭೂಮಿಯು `ಜಿಯಾಯ್ಡ್' (Geoid) ಆಕಾರದಲ್ಲಿದ್ದು ಅದನ್ನು ಮಾದರಿ ಗೋಳಗಳಿಂದ ನಿರೂಪಿಸಬಹುದು

## ಮಾದರಿ ಗೋಳದ ಲಕ್ಷಣಗಳು

- `ಗ್ಲೋಬ್' ಇದು ಭೂಮಿಯ ಒಂದು ಚಿಕ್ಕ ಮಾದರಿಯಾಗಿದೆ.
- ಇದು ಭೂಮಿಯ ನೈಜ ಗೋಳಾಕಾರವನ್ನು ತೋರಿಸುತ್ತದೆ ಮತ್ತು ಅದು ನಕಾಶೆಯಂತೆ ಚಪ್ಪಟೆಯಾದುದಲ್ಲ. ಜೊತೆಗೆ ಹಲವು ಲಕ್ಷಣಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡುವುದು

## ನಕ್ಷೆಯ ಮೂಲಾಂಶಗಳು

- **ಶೀರ್ಷಿಕೆ (ತಲೆಬರಹ )**– ಪ್ರತಿಯೊಂದು ನಕ್ಷೆಯು ಅವಶ್ಯಕವಾಗಿ ಶೀರ್ಷಿಕೆಯನ್ನು ಹೊಂದಿರಬೇಕು. ಅದು ನಮಗೆ ಬೇಕಾದ ಒಳವಿಷಯವನ್ನು ತಿಳಿಸುವುದು
- **ಮಾನಕ** – ಮಾಪಕವು ಭೂಮಿಯ ಮೇಲಿನ ಎರಡು ಸ್ಥಳಗಳ ಅಂತರವನ್ನು ತಿಳಿಯಲು ನಮಗೆ ಸಹಾಯವಾಗಿದೆ.
- **ಅಕ್ಷಾಂಶ ಮತ್ತು ರೇಖಾಂಶಗಳು** – ಇವು ಕಾಲ್ಪನಿಕ ರೇಖೆಗಳ ಜಾಲವಾಗಿವೆ. ನಕಾಶೆಯ ಮೇಲಿನ ಸ್ಥಳವೊಂದರ ಸ್ಥಾನ, ದೂರ ಮತ್ತು ದಿಕ್ಕುಗಳನ್ನು ಗುರುತಿಸುವುದಕ್ಕೆ ಸಹಾಯಕವಾಗುತ್ತದೆ.
- **ದಿಕ್ಕು** – ನಕ್ಷೆಯಲ್ಲಿ `ಉ' (N) ಅಕ್ಷರವುಳ್ಳ ಬಾಣದ ಗುರುತಿನ ಚಿಹ್ನೆಯಿಂದ ಉತ್ತರ ದಿಕ್ಕನ್ನು ಸೂಚಿಸಲಾಗುತ್ತದೆ. ಬಾಣದ ತುದಿ ಉತ್ತರಕ್ಕೆ ನಿರ್ದೇಶಕವಾಗಿರುತ್ತದೆ. ಈ ಚಿಹ್ನೆಯಿಂದ ಒಮ್ಮೆ ಉತ್ತರ ದಿಕ್ಕು ತಿಳಿಯುತ್ತಲೇ ಇತರೆ ದಿಕ್ಕುಗಳನ್ನು ಸರಳವಾಗಿ ಗುರುತಿಸಬಹುದು.
- **ಸೂಚಿ** - ನಕ್ಷೆಯಲ್ಲಿ ಸೂಚಿಸಲು ಮತ್ತು ಗುರುತಿಸುವುದಕ್ಕಾಗಿ ಬಳಕೆ ಮಾಡುವ ಯಾವುದೇ ಸೂಚಿಗೆ `ನಕ್ಷಾ ಸೂಚಿ' ಎನ್ನುವರು.



Scanned with OKEN Scanner

## ಭೌಗೋಳಿಕ ಸಂಕೇತಗಳು

- ನೀಲಿ : ಜಲಭಾಗಗಳನ್ನು ಸೂಚಿಸುತ್ತದೆ. – ಮಹಾಸಾಗರ, ಸಮುದ್ರ, ಸರೋವರಗಳು ಇತ್ಯಾದಿ.
- ಹಸಿರು : ಮೈದಾನ ಮತ್ತು ತಗ್ಗು ಪ್ರದೇಶಗಳನ್ನು ತೋರಿಸುತ್ತದೆ.
- ಹಳದಿ : ಎತ್ತರವಾದ ಭೂಭಾಗಗಳು ಅಥವಾ ಮೈದಾನಗಳಿಗಿಂತ ಎತ್ತರವಾದ ಭಾಗಗಳನ್ನು ತೋರಿಸುತ್ತದೆ.
- ಕಂದು : ಬೆಟ್ಟಗಳು ಮತ್ತು ಪರ್ವತಗಳಿಗಿಂತ ಕಡಿಮೆ ಎತ್ತರದ ಭಾಗಗಳನ್ನು ಸೂಚಿಸುತ್ತದೆ.
- ಕಡು ಕಂದು ಬಣ್ಣ : ಅತಿ ಎತ್ತರವಾದ ಪರ್ವತಗಳನ್ನು ನಿರೂಪಿಸುತ್ತದೆ.
- ಬಿಳುಪು ಅಥವಾ ನೇರಳೆ ಬಣ್ಣ : ಹಿಮದಿಂದಾವೃತ ಪ್ರದೇಶಗಳನ್ನು ಸೂಚಿಸುತ್ತವೆ

ಅತ್ಯಂತ ಪುರಾತನ ನಕಾಶೆಯು ಬಾಬಿಲೋನಿಯದಲ್ಲಿ (ಕ್ರಿ.ಪೂ.2300) ಕಂಡುಬಂದರೆ, ಗ್ರೀಕ್‌ನ ಖಗೋಳ ವಿಜ್ಞಾನಿಯಾದ ಕ್ಲಾಡಿಯಸ್ ಟಾಲೆಮಿಯವರ (ಕ್ರಿ.ಶ. 90-168) ಅಟ್ಲಾಸ್ ಪ್ರಥಮದ್ದಾಗಿದೆ.

## ಭೂಮಿಯ ಸ್ವರೂಪ

- ವಿವಿಧ ಭೂಮೇಲ್ಮೈ ಲಕ್ಷಣಗಳನ್ನು 'ಭೂಸ್ವರೂಪಗಳು' ಎಂದು ಕರೆಯಲಾಗಿದೆ.
- ಅನೇಕ ಮೇಲ್ಮೈ ಲಕ್ಷಣಗಳನ್ನು ಭೂಮೇಲ್ಭಾಗದಲ್ಲಿ ಕಾಣಬಹುದು. ಅವುಗಳೆಂದರೆ ಪರ್ವತ, ಬೆಟ್ಟ, ಕಣಿವೆ, ಮೈದಾನ, ಮರುಭೂಮಿ ಮತ್ತು ದ್ವೀಪಗಳು
- ಭೂಮಿಯ ಮೇಲ್ಭಾಗವು ಆಂತರಿಕ ಮತ್ತು ಬಾಹ್ಯ ಶಕ್ತಿಗಳ ಕಾರ್ಯಾಚರಣೆಯಿಂದ ಬದಲಾಗುತ್ತದೆ.

6ನೇ ತರಗತಿ ಸಮಾಜ ವಿಜ್ಞಾನ ಭೂಗೋಳ ( 2022 )ಪರಿಷ್ಕೃತ ಮುದ್ರಣ



Scanned with OKEN Scanner

## ಭೂಸ್ವರೂಪಗಳ ವಿಧಗಳು

ಭೂಸ್ವರೂಪಗಳನ್ನು ಮೂರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ:

1 ಪರ್ವತಗಳು

2.ಪ್ರಸ್ಥಭೂಮಿಗಳು

3.ಮೈದಾನಗಳು

### 1. ಪರ್ವತಗಳು

- ಪರ್ವತಗಳು ಅತ್ಯಂತ ಪ್ರಮುಖ ಹಾಗೂ ಸ್ಫೂರ್ತಿದಾಯಕ ಭೂಸ್ವರೂಪಗಳು.
- ಅವು ಪೃಥ್ವಿಯ ಮೇಲ್ಮೈಯಲ್ಲಿ ಸುತ್ತಲಿನ ಪ್ರದೇಶಗಳಿಗಿಂತ ಎತ್ತರವುಳ್ಳ ಹಾಗೂ ಮೇಲಕ್ಕೆತ್ತಲ್ಪಟ್ಟ ಭೂಭಾಗಗಳು
- ಕಡಿದಾದ ಇಳಿಜಾರುಗಳು ಮತ್ತು ಶಿಖರಗಳನ್ನು ಹೊಂದಿದ್ದು ಸಮುದ್ರಮಟ್ಟದಿಂದ ಸಾವಿರ ಮೀಟರ್‌ಗಳಿಗೂ ಎತ್ತರವಾದವು.
- ಪರ್ವತದ ಅತ್ಯಂತ ಎತ್ತರವುಳ್ಳ ತುದಿಗೆ ಶಿಖರ ಎನ್ನುವರು,
- ಶಿಖರಗಳನ್ನುಳ್ಳ ಅಥವಾ ಇಲ್ಲದ ಪರ್ವತಗಳ ಸಾಲನ್ನು 'ಪರ್ವತ ಸರಣಿ' ಎನ್ನುವರು.

### ಈ ಪರ್ವತ ಸರಣಿಯನ್ನು ಹೊಂದಿಸಿ ಬರೆಯಿರಿ

- ಹಿಮಾಲಯ (ಏಷ್ಯ)
- ಆಲ್ಪ್ಸ್ (ಯೂರೋಪ್)
- ಆಂಡೀಸ್ (ದ.ಅಮೆರಿಕ)
- ರಾಕಿ (ಉತ್ತರ ಅಮೆರಿಕ)



Scanned with OKEN Scanner

## ಪರ್ವತಗಳ ವಿಧಗಳು

- ಪರ್ವತಗಳು ಸಾಮಾನ್ಯವಾಗಿ ಶಿಲಾಸ್ತರಗಳ ಮಡಿಕೆ ಮತ್ತು ಜ್ವಾಲಾಮುಖಿಗಳಂತಹ ಆಂತರಿಕ ಶಕ್ತಿಗಳಿಂದ ನಿರ್ಮಾಣವಾಗುತ್ತವೆ.

  ಅವು ಸಾಮಾನ್ಯವಾಗಿ ಕಠಿಣ ಶಿಲೆಗಳಿಂದ ರಚಿತವಾದವು ಪರ್ವತಗಳು ಪುರಾತನ ಅಥವಾ ಇತ್ತೀಚೆಗೆ ನಿರ್ಮಾಣಗೊಂಡವು.

  - ಹಿಮಾಲಯ ಮತ್ತು ಆಲ್ ಪರ್ವತಗಳು ಇತ್ತೀಚಿನ ಪರ್ವತಗಳು
  - ಆಪಲೇಷಿಯನ್(ಉತ್ತರ ಅಮೆರಿಕ) ಮತ್ತು ಅರಾವಳಿ (ಭಾರತ) ಸರಣಿಗಳು ಪುರಾತನ ಕಾಲದ ಪರ್ವತಗಳಾಗಿರುತ್ತವೆ

ಅತ್ಯಂತ ಎತ್ತರವುಳ್ಳ ಪರ್ವತಗಳ ಅತಿ ಎತ್ತರ ಭಾಗಗಳು ಹಿಮದಿಂದಾವೃತವಾಗಿವೆ.ನಿರ್ಮಾಣದ ಆಧಾರದ ಮೇಲೆ ಪರ್ವತಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

- ಮಡಿಕೆ ಪರ್ವತಗಳು
- ಖಂಡ ಪರ್ವತಗಳು
- ಜ್ವಾಲಾಮುಖಿಜನಿತ ಪರ್ವತಗಳು

**ಮಡಿಕೆ ಪರ್ವತಗಳು:** ಇವು ಶಿಲಾಸ್ತರಗಳು ಮುದುಡಿಕೊಳ್ಳುವುದರಿಂದ ನಿರ್ಮಾಣ ವಾಗುವುವು. ಅವು ಅತೀ ಎತ್ತರವುಳ್ಳ ಪರ್ವತಗಳು

ಉದಾ: ಹಿಮಾಲಯ ಮತ್ತು

**ಖಂಡ ಪರ್ವತಗಳು:** ಎರಡು ಸಮಾನಾಂತರ ಶಿಲಾಸ್ತರಭಂಗಗಳ ನಡುವಣ ಭಾಗವು ಮೇಲಕ್ಕೆತ್ತಲ್ಪಡುವುದರಿಂದ ನಿರ್ಮಾಣವಾಗುತ್ತವೆ. ಅವುಗಳು ಅತೀ ಎತ್ತರವಾಗಿಲ್ಲ.

ಉದಾ:



Scanned with OKEN Scanner

- ಸಿಯೆರ್ರ ನಿವೇಡ (ಉತ್ತರ ಅಮೆರಿಕ)
- ವಾಸ್ಗಸ್ - (ಯುರೋಪ್ )

**ಜ್ವಾಲಾಮುಖಿಜನಿತ ಪರ್ವತಗಳು:** ಇವು ಜ್ವಾಲಾಮುಖಿ ಸ್ಫೋಟಿತ ವಸ್ತುಗಳು ರಾಶಿಗೊಂಡು ನಿರ್ಮಾಣವಾಗುತ್ತವೆ. ಅವುಗಳ ತಳ ವಿಸ್ತಾರವಾಗಿದ್ದು, ಎತ್ತರವಾದ ಶಂಖಾಕೃತಿಯ ಶಿಬಿರಗಳನ್ನೊಳಗೊಂಡಿವೆ.

- ಜಪಾನಿನ - ಫೂಜಿಯಾಮ ಮತ್ತು ಆಫ್ರಿಕಾದ ಕಿಲಿಮಂಜಾರೊ.

## 2. ಪ್ರಸ್ಥಭೂಮಿಗಳು

ಆವು ಸಮತಟ್ಟಾದ ಮೇಲ್ಭಾಗ ಮತ್ತು ಕಡಿದಾದ ಬದಿಗಳಿಂದ ಕೂಡಿವೆ. ಇವುಗಳನ್ನು ಪೀಠಭೂಮಿ ಗಳೆಂದು ಕೂಡ ಕರೆಯುತ್ತಾರೆ.

- ಜಗತ್ತಿನಲ್ಲಿ ಅತಿ ಎತ್ತರದಲ್ಲಿರುವ ಪ್ರಸ್ಥಭೂಮಿ - ಟಿಬೆಟಿನ ಪ್ರಸ್ಥಭೂಮಿ

**ಅಂತರಪರ್ವತ ಪ್ರಸ್ಥಭೂಮಿಗಳು**- ಸುತ್ತಲೂ ಪರ್ವತ ಸರಣಿಗಳಿಂದ ಸುತ್ತುವರೆದಿರುತ್ತವೆ.
ಉದಾ: ಟಿಬೆಟ್ ಪ್ರಸ್ಥಭೂಮಿ (ಏಷ್ಯಾ ), ಬೊಲಿವಿನ ಪ್ರಸ್ಥಭೂಮಿ (ದಕ್ಷಿಣ ಅಮೆರಿಕ)

**ಪರ್ವತವಾದ ಪ್ರಸ್ಥಭೂಮಿಗಳು** - ಒಂದು ಕಡೆ ಪರ್ವತಗಳಿಂದಲೂ ಮತ್ತು ಇನ್ನೊಂದು ಕಡೆ ಮೈದಾನ ಅಥವಾ ಸಾಗರಗಳಿಂದ ಸುತ್ತುವರಿದಿರುತ್ತವೆ.
ಉದಾ: ಪಟಗೋನಿಯ ಪ್ರಸ್ಥಭೂಮಿ (ದಕ್ಷಿಣ ಅಮೆರಿಕ)

**ಖಂಡಾಂತರ ಪ್ರಸ್ಥಭೂಮಿಗಳು** - ಖಂಡಾಂತರ ಭಾಗ ಮೇಲಕ್ಕೆತ್ತುವಿಕೆ ಅಥವಾ ಶಿಲಾಪಾಕದ ಹರಡುವಿಕೆಯಿಂದ ನಿರ್ಮಾಣವಾದವು
ಉದಾ : ವಾಯವ್ಯ ದಖನ್ ಪ್ರಸ್ಥಭೂಮಿ ( ಭಾರತ )



Scanned with OKEN Scanner

### 3. ಮೈದಾನಗಳು

ವಿಶಾಲವಾದ ಸಮತಟ್ಟಾದ ಅಥವಾ ಸ್ವಲವೇ ಏರಿಳಿತಗಳುಳ್ಳ ತಗ್ಗಾದ ಭೂಭಾಗಗಳನ್ನು 'ಮೈದಾನ' ಗಳೆಂದು ಕರೆಯುವರು

**ರಚನಾ ಮೈದಾನಗಳು:** ಸಮುದ್ರದ ತಳಭಾಗವು ಮೇಲಕ್ಕೆತ್ತಲ್ಪಡುವುದರಿಂದಲೋ ಅಥವಾ ಯಾವುದಾದರೊಂದು ಭಾಗವು ತಗ್ಗಾಗುವುದರಿಂದಲೂ ನಿರ್ಮಾಣವಾಗುತ್ತವೆ.
ಉದಾ: ಅಮೆರಿಕ ಸಂಯುಕ್ತ ಸಂಸ್ಥಾನದ (ಯುಎಸ್ಎ) ಆಗ್ನೇಯದ ಮೈದಾನ.

**ಸವೆತದಿಂದಾದ ಮೈದಾನಗಳು:** ಇವು ಪರ್ವತ ಮತ್ತು ಪ್ರಸ್ಥಭೂಮಿಗಳು ಸವೆತಕ್ಕೊಳಗಾಗಿ ತಗ್ಗು ಮೈದಾನಗಳಾಗುವುದರಿಂದ ನಿರ್ಮಾಣವಾಗುತ್ತವೆ. ಉದಾ: ಸೈಬೀರಿಯಾದ ಪಶ್ಚಿಮ ಭಾಗ

**ಸಂಚಯನದಿಂದಾದ ಮೈದಾನಗಳು:** ನದಿ, ಹಿಮನದಿ, ಮಾರುತ ಮೊದಲಾದ ನೈಸರ್ಗಿಕ ಕರ್ತೃಗಳು ಹೊತ್ತು ತಂದ ಮೆಕ್ಕಲು - ಮಡ್ಡಿಗಳ ಸಂಚಯನದಿಂದ ನಿರ್ಮಾಣವಾದವು
ಉದಾ: ಸಿಂಧೂ-ಗಂಗಾ ನದಿ ಬಯಲು.

### 4. ಮರುಭೂಮಿಗಳು

ಮೇಲ್ಮೈ ಲಕ್ಷಣಗಳಿಂದಾಗಿ ಪರ್ವತ, ಪ್ರಸ್ಥಭೂಮಿ ಮತ್ತು ಮೈದಾನಗಳು ಪರಸ್ಪರ ಭಿನ್ನವಾಗಿವೆ. ವಾಯುಗುಣದ ಪರಿಣಾಮದಿಂದಾಗಿ ಮರುಭೂಮಿಗಳು ನಿರ್ಮಾಣವಾಗಿವೆ.

- ಅಂಟಾರ್ಕ್ಟಿಕ ಮತ್ತು ಯೂರೋಪ್‌ಗಳನ್ನು ಹೊರತುಪಡಿಸಿ ಉಳಿದೆಲ್ಲ ಖಂಡಗಳಲ್ಲಿ ಮರುಭೂಮಿಗಳಿವೆ
- ಸಹರಾ ಪ್ರಪಂಚದಲ್ಲೇ ವಿಶಾಲವಾದ ಮರುಭೂಮಿ



Scanned with OKEN Scanner

- ಮರುಭೂಮಿಯ ಯಾವ ಭಾಗದಲ್ಲಿ ಅಂತರ್ಜಲವು ಚಿಲುಮೆಯ ರೂಪದಲ್ಲಿ ಹೊರಬರುವುದೋ ಅದನ್ನು ಓಯಸಿಸ್ ಎನ್ನುವರು. ಇದು ಅಲ್ಲಿಯ ಸಸ್ಯ ಮತ್ತು ಮಾನವ ವಸತಿಗಳ ಬೆಳವಣಿಗೆಗೆ ನೆರವಾಗುವುದು.

## 5. ದ್ವೀಪಗಳು

ದ್ವೀಪವೆಂದರೆ ಸಾಗರ, ಸಮುದ್ರ, ಸರೋವರ ಅಥವಾ ನದಿಗಳಲ್ಲಿ ಸುತ್ತಲೂ ನೀರಿನಿಂದಾವರಿಸಿದ ಚಿಕ್ಕ ಭೂಭಾಗ.

- ಇದು ಒಂದು ವಿಧದ ಭೂಸ್ವರೂಪ, ಅತಿ ಚಿಕ್ಕದ್ವೀಪಗಳನ್ನು ಕಿರುದ್ವೀಪ **(Islets)** ಎನ್ನುವರು.
- ನದಿ ಮತ್ತು ಸರೋವರಗಳ ನಡುವಣ ದ್ವೀಪಗಳಿಗೆ ನಡುಗಡ್ಡೆ ಗಳೆಂದು ಕರೆಯುವರು,
- ಭೌಗೋಳಿಕ ದೃಷ್ಟಿಯಲ್ಲಿ ದ್ವೀಪಗಳ ಗುಂಪನ್ನು 'ದ್ವೀಪಸ್ತೋಮ' (ಸಮೂಹ) ಎನ್ನುವರು, ಉದಾ: ಯರ್-ಡೆಲ್ ಫ್ಯೂಗೋ , ಇಂಡೋನೇಷ್ಯ

ಖಂಡದ ಪ್ರಧಾನ ಭೂಭಾಗದಿಂದ ಪ್ರತ್ಯೇಕಗೊಂಡು ನಿರ್ಮಾಣಗೊಂಡ ದ್ವೀಪಗಳು, - ಗ್ರೀನ್ಲ್ಯಾಂಡ್, ಐಸ್ಲ್ಯಾಂಡ್

ಜ್ವಾಲಾಮುಖಿ ದ್ವೀಪ - ಸಾಗರ ದೀಪಗಳು ಬಹುವಾಗಿ ಜ್ವಾಲಾಮುಖಿ ವಸ್ತುಗಳ ಸಂಚಯದಿಂದ ಸಾಗರಗಳ ಮಧ್ಯದಲ್ಲಿ ನಿರ್ಮಾಣಗೊಂಡವು

- ಸಾಮಾತ್ರ (ಇಂಡೋನೇಷ್ಯ).
- ಹವಳದ ಹುಳುಗಳಿಂದ ಕಟ್ಟಲ್ಪಟ್ಟ ದಿಣ್ಣೆಗಳನ್ನು 'ಹವಳದ ದ್ವೀಪ'ಗಳೆಂದು ಕರೆಯುವರು. ಉದಾ: ಲಕ್ಷದ್ವೀಪ (ಭಾರತ)
- ಅಂಡಮಾನ್-ನಿಕೋಬಾರ್ ಹಾಗೂ ಲಕ್ಷದ್ವೀಪಗಳು ಭಾರತದ ಪ್ರಮುಖ ದ್ವೀಪಗಳಾಗಿವೆ.
- ಕರ್ನಾಟಕದ ತೀರದಲ್ಲಿಯೂ ಕೆಲವು ದ್ವೀಪಗಳಿವೆ

. ಉದಾ: ಸೇಂಟ್ ಮೇರಿ ದ್ವೀಪ (ಕೋಕೊನಟ್ ದ್ವೀಪ) ಇತ್ಯಾದಿ,



Scanned with OKEN Scanner

## ಪ್ರಪಂಚದ ಪ್ರಮುಖ ಸ್ವಾಭಾವಿಕ ಪ್ರದೇಶಗಳು

ಒಂದೇ ರೀತಿಯ ಪಾಕೃತಿಕ ಲಕ್ಷಣಗಳನ್ನು ಹೊಂದಿರುವ ಭಾಗಗಳನ್ನು ಒಟ್ಟುಗೂಡಿಸಿ ಸ್ವಾಭಾವಿಕ ಪ್ರದೇಶಗಳು ಎನ್ನುತ್ತೇವೆ,

ವಾಯುಗುಣವನ್ನಾಧರಿಸಿ ಭೂ ಮೇಲ್ಮೈಯನ್ನು ಅನೇಕ ಸ್ವಾಭಾವಿಕ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಪ್ರಮುಖ ಸ್ವಾಭಾವಿಕ ಪ್ರದೇಶಗಳು ಈ ಕೆಳಕಂಡಂತಿವೆ.

1. ಸಮಭಾಜಕ ವೃತ್ತಪ್ರದೇಶಗಳು ಅಥವಾ ಅಮೆಜಾನ್ ಮಾದರಿ,
2. ಉಷ್ಣವಲಯದ ಹುಲ್ಲುಗಾವಲು ಪ್ರದೇಶ ಅಥವಾ ಸುಡಾನ್ ಮಾದರಿ,
3. ಉಷ್ಣವಲಯದ ಮಾನ್ಸೂನ್ ಪ್ರದೇಶಗಳು.
4. ಉಷ್ಣವಲಯದ ಸಾಗರಿಕ ಪ್ರದೇಶಗಳು,
5. ಉಷ್ಣವಲಯದ ಮರುಭೂಮಿ ಪ್ರದೇಶಗಳು ಅಥವಾ ಸಹಾರಾ ಮಾದರಿ.
6. ಸಮಶೀತೋಷ್ಣವಲಯದ ಮರುಭೂಮಿಗಳು
7. ಮೆಡಿಟರೇನಿಯನ್ ಪ್ರದೇಶಗಳು
8. ಬೆಚ್ಚಗಿನ ಸಮಶೀತೋಷ್ಣವಲಯದ ಪೂರ್ವ ಅಂಚಿನ ಪ್ರದೇಶಗಳು ( ಚೀನಾ ಮಾದರಿ )
9. ತಂಪು ಸಮಶೀತೋಷ್ಣವಲಯದ ಸಾಗರಿಕ ಪ್ರದೇಶಗಳು ( ಪ. ಯುರೋಪ್ ಮಾದರಿ )
10. ಸಮಶೀತೋಷ್ಣವಲಯದ ಹುಲ್ಲುಗಾವಲು ಪ್ರದೇಶಗಳು ಅಥವಾ ಪ್ರೈರಿ ಮಾದರಿ
11. ತಂಪು ಸಮಶೀತೋಷ್ಣವಲಯದ ಪೂರ್ವ ಕರಾವಳಿ ಪ್ರದೇಶಗಳು ( ಸೆಂಟ್ ಲಾರೆನ್ಸ್ ಮಾದರಿ )
12. ಶೀತ ಖಂಡಾಂತರ ಪ್ರದೇಶಗಳು ಅಥವಾ ಟೈಗಾ ಪ್ರದೇಶಗಳು.
13. ಟಂಡ್ರ ಪ್ರದೇಶಗಳು ಅಥವಾ ಶೀತ ಮರುಭೂಮಿ

- ಪ್ರಪಂಚದ ಅತಿ ಎತ್ತರವಾದ ಶಿಖರ ಮೌಂಟ್ ಎವರೆಸ್ಟ್
- ಆಫ್ರಿಕಾದ ಪ್ರಸ್ಥಭೂಮಿಯು ಚಿನ್ನ ಮತ್ತು ವಜ್ರದ ಗಣಿಗಾರಿಕೆಗೆ ಪ್ರಸಿದ್ಧಿಯಾಗಿದೆ



Scanned with OKEN Scanner

- ಗಂಗಾ ನದಿ ಮುಖಜಭೂಮಿಯು ಪ್ರಪಂಚದಲ್ಲೇ ದೊಡ್ಡದಾಗಿದ್ದು, ಇದನ್ನು ಸುಂದರವನ ಎಂತಲೂ ಕರೆಯುವರು.

ಸಮಶೀತೋಷ್ಣವಲಯದ ಹುಲ್ಲುಗಾವಲುಗಳನ್ನು ಹೊಂದಿಸಿ ಬರೆಯಿರಿ

- ಆಫ್ರಿಕಾ - ಸ್ಟೈಪ್ಪಿ
- ಉತ್ತರ ಅಮೇರಿಕಾ - ಪ್ರೇರೀ
- ದಕ್ಷಿಣ ಅಮೆರಿಕಾ- ಪಂಪಾಸ್
- ಆಸ್ಟ್ರೇಲಿಯಾ- ಡೌನ್ಸ್
- ದಕ್ಷಿಣ ಆಫ್ರಿಕಾದಲ್ಲಿ - ವೆಲ್ಸ್

• ಭಾರತದ ವಾಯವ್ಯ ಭಾಗದಲ್ಲಿ ಉಷ್ಣವಲಯದ ಥಾರ್ ಮರುಭೂಮಿ ಇದೆ.

## ಏಷ್ಯಾ

### (ಏಷ್ಯ-ವೈಪರೀತ್ಯಗಳ ಖಂಡ)

1. ಏಷ್ಯಾ ಖಂಡವನ್ನು "ವೈಪರೀತ್ಯಗಳ ಖಂಡ" ಎಂದು ಕರೆಯಲು ಕಾರಣವೇನು?

1) ಪ್ರಪಂಚದ ಭೂಖಂಡಗಳಲ್ಲಿ ಏಷ್ಯಾ ಖಂಡವು ದೊಡ್ಡದಾಗಿದೆ ☑

2) ಈ ಖಂಡದಲ್ಲಿ ಅತ್ಯಂತ ಎತ್ತರವುಳ್ಳ ಪರ್ವತ, ಪ್ರಸ್ಥಭೂಮಿ, ಫಲವತ್ತಾದ ವಿಶಾಲ ಮೈದಾನ, ಮರುಭೂಮಿ, ನದಿವ್ಯವಸ್ಥೆ ಮತ್ತು ಸರೋವರಗಳು ಕಂಡು ಬರುತ್ತವೆ. ☑

3) ಭಾಷೆ, ಧರ್ಮ ಜನಸಂಖ್ಯೆಯ ಹಂಚಿಕೆ ಮತ್ತು ಜನಸಾಂದ್ರತೆಗಳಲ್ಲಿಯೂ ನಾವು ವೈವಿಧ್ಯತೆಯನ್ನು ಕಾಣಬಹುದು ☑

4) ಪ್ರಾಕೃತಿಕ ಲಕ್ಷಣ ವಾಯುಗುಣ, ಸಸ್ಯವರ್ಗ, ವನ್ಯಜೀವಿ, ಮಣ್ಣಿಜೀವಿ ಪ್ರಕಾರ ಮೊದಲಾದವುಗಳಲ್ಲಿ ವೈವಿಧ್ಯ ಹೊಂದಿದೆ ☑



Scanned with OKEN Scanner

- ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

ಸ್ಥಾನ:

- ಏಷ್ಯ ಖಂಡವು 1°- 16 'ಉತ್ತರದಿಂದ 77°-41' ಉತ್ತರ: ಅಕ್ಷಾಂಶ ಹಾಗೂ 26° -04 ಪೂರ್ವದಿಂದ 169 °-40' ಹಕ್ಕಿಯು ರೇಖಾಂಶಗಳ ನಡುವೆ ವಿಸ್ತರಿಸಿದೆ. ಮಲೇಷ್ಯದ ಸ್ವಲ್ಪ ದಕ್ಷಿಣದಲ್ಲಿ ಭೂಮಧ್ಯರೇಖೆ ಇದೆ, ಕರ್ಕಟಕ ಸಂಕ್ರಾಂತಿ ವೃತ್ತವು ಭಾರತ ಮತ್ತು ಅರೇಬಿಯಗಳ ಮೂಲಕ ಹಾಯ್ದು ಹೋಗಿವೆ.

ವಿಸ್ತೀರ್ಣ: ಏಷ್ಯ ಖಂಡದ ಒಟ್ಟು ಭೌಗೋಳಿಕ ವಿಸ್ತೀರ್ಣ ಸುಮಾರು 44 ಮಿಲಿಯನ್ ಚ.ಕಿ.ಮೀ.ಗಳು, ಇದು ಪ್ರಪಂಚದ ಮೇಲೆ ಭೂಭಾಗದ ವಿಸ್ತೀರ್ಣದಲ್ಲಿ ಶೇ.33 ಭಾಗದಷ್ಟಾಗಿದೆ.

- ಏಷ್ಯಾ ಖಂಡವು ಪೂರ್ಣವಾಗಿ ಉತ್ತರ ಗೋಳಾರ್ಧದಲ್ಲಿದೆ

ಭೌಗೋಳಿಕ ಸನ್ನಿವೇಶ

ಏಷ್ಯಾ ಖಂಡವು ಮೂರು ಕಡೆ ಸಾಗರಗಳು ಮತ್ತು ಒಂದು ಈ ಭೂಭಾಗದಿಂದಾವರಿಸಿದೆ.

- ಉತ್ತರದಲ್ಲಿ – ಆರ್ಕ್ಟಿಕ್
- ಪೂರ್ವಭಾಗದಲ್ಲಿ - ಪೆಸಿಫಿಕ್
- ದಕ್ಷಿಣದಲ್ಲಿ - ಹಿಂದೂಸಾಗರಗಳು,
- ಪಶ್ಚಿಮಕ್ಕೆ - ಯೂರೋಪ್ ಖಂಡವಿದೆ.

ಏಷ್ಯ ಮತ್ತು ಯೂರೋಪ್ ಖಂಡಗಳ ಗಡಿಯು ಸಾಂಪ್ರದಾಯಕವಾದ ಕಾಲ್ಪನಿಕ ರೇಖೆಯಾಗಿದ್ದು, ಅದು ಅಂಕುಡೊಂಕಾಗಿದೆ. ಮತ್ತು ಯೂರಲ್ ಸರ್ವತ, ಕ್ಯಾಸ್ಪಿಯನ್ ಸಮುದ್ರ, ಕಕಾಸಸ್ ಪರ್ವತ ಮತ್ತು ಕಪ್ಪು ಸಮುದ್ರಗಳ ಮುಖಾಂತರ ಹಾಯ್ದು ಹೋಗುತ್ತದೆ.



Scanned with OKEN Scanner

- ಯುರೋಪ್ ಮತ್ತು ಏಷ್ಯಾಗಳನ್ನು ಒಟ್ಟುಗೂಡಿಸಿ ಯೂರೆಷ್ಯ ಎನ್ನುವರು
- ಏಷಿಯಾ ಮತ್ತು ಆಫ್ರಿಕಾ ಖಂಡಗಳ ಗಡಿ - ಸೊಯೇಜ್ ಕಾಲುವೆ
- ಏಷ್ಯ ಮತ್ತು ಆಸ್ಟ್ರೇಲಿಯಗಳ ಗಡಿ ರೇಖೆಯು ನ್ಯೂಗಿನಿ ಮತ್ತು ಆಸ್ಟ್ರೇಲಿಯಗಳ ನಡುವೆ ಹಾಯ್ದು ಹೋಗುತ್ತದೆ.

- ಏಷ್ಯಾ ಖಂಡ ಒಟ್ಟು ಎಷ್ಟು ರಾಷ್ಟ್ರಗಳಿವೆ - 48

**1.ಪೂರ್ವ ಏಷ್ಯಾವು ಈ ಕೆಳಕಂಡ ಯಾವ ರಾಷ್ಟ್ರಗಳ ಗುಂಪನ್ನು ಹೊಂದಿವೆ?**

- ಚೀನಾ, ಉತ್ತರ ಮತ್ತು ದಕ್ಷಿಣ ಕೊರಿಯ, ಜಪಾನ್, ಹಾಂಕ್ ಕಾಂಗ್, ತೈವಾನ್ ಮತ್ತು ಮಂಗೋಲಿಯ ದೇಶಗಳು ಸೇರಿವೆ.

**2.ಆಗ್ನೇಯ ಏಷ್ಯಾವು ಈ ಕೆಳಕಂಡ ಯಾವ ರಾಷ್ಟ್ರಗಳ ಗುಂಪನ್ನು ಹೊಂದಿವೆ?**

- ಮಯನ್ಮಾರ್, ಲಾವೋಸ್, ವಿಯೆಟ್ನಾಂ, ಥೈಲೆಂಡ್, ಕಾಂಬೋಡಿಯಾ, ಮಲೇಷ್ಯ, ಇಂಡೋನೇಷ್ಯ, ಸಿಂಗಾಪುರ, ಬ್ರುನ್ಹೆ, ಮತ್ತು ಫಿಲಿಪೈನ್ಸ್ ದೇಶಗಳನ್ನೊಳಗೊಂಡಿದೆ.

**3. ದಕ್ಷಿಣ ಏಷ್ಯಾವು ಈ ಕೆಳಕಂಡ ಯಾವ ರಾಷ್ಟ್ರಗಳ ಗುಂಪನ್ನು ಹೊಂದಿವೆ?**

- ಭಾರತ, ಬಾಂಗ್ಲಾದೇಶ, ಭೂತಾನ, ನೇಪಾಳ,ಪಾಕಿಸ್ತಾನ. ಶ್ರೀಲಂಕ ಮತ್ತು ಮಾಲ್ಡೀವ್ಸ್ ಗಳನ್ನು ಒಳಗೊಂಡಿದೆ.

**4. ನೈಋತ್ಯ ಏಷ್ಯಾವು ಈ ಕೆಳಕಂಡ ಯಾವ ರಾಷ್ಟ್ರಗಳ ಗುಂಪನ್ನು ಹೊಂದಿವೆ?**

- ಅಫ್‌ಘಾನಿಸ್ತಾನ, ಬಹ್ರೇನ್, ಸೈಪ್ರಸ್, ಇರಾನ್, ಇರಾಕ್, ಇಸ್ರೇಲ್, ಜೋರ್ಡಾನ್, ಕುವೈತ್, ಲೆಬನಾನ್, ಓಮನ್, ಕಟಾರ್, ಸಿರಿಯ, ಪ್ಯಾಲೆಸ್ಟೈನ್, ಸೌದಿಅರೇಬಿಯ, ಅರಬ್ ಎಮಿರೇಟ್ಸ್, ಯೆಮನ್ ಮತ್ತು ಟರ್ಕಿ ದೇಶಗಳು ಈ ವಿಭಾಗದಲ್ಲಿ ಸೇರುತ್ತವೆ



Scanned with OKEN Scanner

5) ಮಧ್ಯ ಏಷ್ಯ ಈ ಕೆಳಕಂಡ ಯಾವ ರಾಷ್ಟ್ರಗಳ ಗುಂಪನ್ನು ಹೊಂದಿವೆ?

- ಕಜಕಿಸ್ತಾನ, ಕಿರ್ಘಿಸ್ತಾನ, ತಜಕಿಸ್ತಾನ, ಟರ್ಕ್ಮೇನಿಸ್ತಾನ ಮತ್ತು ಉಜ್ಬೇಕಿಸ್ತಾನ ಹಾಗೂ ಸೈಬೀರಿಯ(ರಷ್ಯ)ಗಳು.

ವಾಯವ್ಯ ತಗ್ಗು ಮೈದಾನಗಳು - ಏಷ್ಯದ ಪ್ರಾಕೃತಿಕ ಲಕ್ಷಣಗಳಲ್ಲಿ ಹೆಚ್ಚು ಮಹತ್ವವುಳ್ಳದ್ದು. ಬೇರಿಂಗ್ ಜಲಸಂಧಿಯಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವಿಸ್ತರಿಸಿದೆ.

- ಕೇಂದ್ರದ ಎತ್ತರ ಭಾಗಗಳು ಮತ್ತು ಆರ್ಕ್ಟಿಕ್ ಸಾಗರದ ನಡುವೆ ಕಂಡುಬರುತ್ತದೆ
- ತ್ರಿಕೋನ ಆಕಾರವುಳ್ಳ ಈ ವಿಶಾಲವಾದ ತಗ್ಗು ಮೈದಾನವನ್ನು ಸೈಬೀರಿಯ ಮೈದಾನ' ಎಂದು ಕರೆಯುತ್ತಾರೆ.

ವಾಯವ್ಯ ತಗ್ಗು ಮೈದಾನದ ಮೂಲಕ ಹರಿಯುವ ಕೆಲವು ನದಿಗಳು ಯಾವುವು?

- ಲೀನ, ಓಬ್ ಮತ್ತು ಯೆನ್ಸಿ

ಮಧ್ಯ ಏಷ್ಯದಲ್ಲಿರುವ ಪರ್ವತ ಸರಣಿಗಳನ್ನು ಕೇಂದ್ರದ ಎತ್ತರ ಭಾಗಗಳು' ಎನ್ನುವರು.

ಇವು ಕಠಿಣ ಮತ್ತು ಸ್ಫಟಿಕ ಶಿಲೆಗಳಿಂದ ರಚನೆಗೊಂಡ ಪುರಾತನ ಪ್ರಸ್ಥಭೂಮಿಗಳು - ದಕ್ಷಿಣ ಪ್ರಸ್ಥಭೂಮಿಗಳು

ನದಿಗಳ ಮಹಾ ಮೈದಾನಗಳು : ಹಿಂದೂ ಸಾಗರ ಅಥವಾ ಪೆಸಿಫಿಕ್ ಸಾಗರಗಳಿಗೆ ಸೇರುವ ಏಷ್ಯದ ನದಿಗಳ ಮೈದಾನಗಳನ್ನೊಳಗೊಂಡಿದೆ. ಇಲ್ಲಿ ಹರಿಯುವ ನದಿಗಳು ಮೆಕ್ಕಲು ಮಣ್ಣನ್ನು ಸಂಚಯ ಮಾಡುವುದರೊಂದಿಗೆ ಫಲವತ್ತಾದ ಮೈದಾನಗಳನ್ನು ನಿರ್ಮಿಸಿವೆ.

ಈ ವಿಭಾಗದ ಪ್ರಮುಖ ಮೈದಾನಗಳೆಂದರೆ:

- ಸಿರಿಯ ಮತ್ತು ಇರಾಕ್‌ನ ಟೈಗ್ರಿಸ್-ಯುಪ್ರಟೀಸ್,
- ಭಾರತ-ಪಾಕಿಸ್ತಾನಗಳ ಸಿಂಧೂ-ಗಂಗಾ ಮೈದಾನಗಳು,



Scanned with OKEN Scanner

- ಮಯನ್ಮಾರಿನ ಇರವಾಡಿ,
- ಇಂಡೊಚೀನದ ಮೀನಾಮ್ ಮತ್ತು ಮೀಕಾಂಗ್,
- ಚೀನದ ಚಿಯಾಂಗ್-ಜಿಯಾಂಗ್ (ಯಾಂಗ್‌ಟ್ಸೆ)

ಸಿಕಿಯಾಂಗ್ ಮತ್ತು ಹ್ವಾಂಗ್‌ಹೊ ನದಿ ಮೈದಾನಗಳು

ದ್ವೀಪ ಸಮೂಹ : ಏಷ್ಯಖಂಡದ ಆಗ್ನೇಯ ಮತ್ತು ಪೆಸಿಫಿಕ್ ತೀರಗಳಲ್ಲಿ ಅನೇಕ ದ್ವೀಪಗಳಿವೆ

1. ಬಂಗಾಳ ಕೊಲ್ಲಿಗೆ ಸೇರುವ ಮಯನ್ಮಾರಿನ ನದಿಗಳು

( GPSTR ಇಲಾಖೆಯ ಮಾದರಿ )

- ಸಿಟ್ಯಾಂಗ್, ಸಾಲ್ವಿನ್ ಮತ್ತು ಇರವಾಡಿ

2. ದಕ್ಷಿಣ ಚೀನಾ ಸಮುದ್ರವನ್ನು ಸೇರುವ ಇಂಡೋ ಚೀನಾದ ನದಿಗಳು

- ಮೀನಾಮ್ & ಮೀಕಾಂಗ್

3. ಆರ್ಕ್ಟಿಕ್ ಸಾಗರ ಸೇರುವ ನದಿಗಳು

    - ಓಬ್, ಯೆನ್ಸಿ, ಮತ್ತು ಲೀನ

4. ಈ ಗುಂಪಿಗೆ ಸೇರಿದ ನದಿಗಳು ಒಳನಾಡಿನ ಸಮುದ್ರಗಳಿಗೆ ಸೇರುವವು. ವೋಲ್ಗ ಮತ್ತು ಯೂರಲ್ ನದಿ ಕ್ಯಾಸ್ಪಿಯನ್ ಸಮುದ್ರವನ್ನು ಮತ್ತು ಅಮುದರಿಯ ಮತ್ತು ಸಿರ್ ದರಿಯಾ ನದಿಗಳು ಅರಲ್ ಸಮುದ್ರವನ್ನೂ ಸೇರುತ್ತವೆ

- ವ್ಯವಸಾಯವು ಏಷ್ಯದ ಪ್ರಮುಖ ವೃತ್ತಿ, ಸುಮಾರು ನಾಲ್ಕನೇ ಮೂರು ಭಾಗದಷ್ಟು ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ
- ಏಷ್ಯಾ ದಿಂದ ರಫ್ತಾಗುವ ಸರಕುಗಳಲ್ಲಿ ಬಹುಭಾಗ ಕೃಷಿ ಉತ್ಪನ್ನಗಳಾಗಿರುತ್ತವೆ.



Scanned with OKEN Scanner

- ಭತ್ತ ಮತ್ತು ಗೋಧಿಗಳು ಪ್ರಮುಖ ಆಹಾರ ಬೆಳೆಗಳು, ಚೀನ ಮತ್ತು ಭಾರತ ಭತ್ತ ಉತ್ಪಾದಿಸುವ ಪ್ರಮುಖ ದೇಶಗಳಾಗಿದ್ದು, ಪ್ರಪಂಚದ ಭತ್ತದ ಒಟ್ಟು ಉತ್ಪಾದನೆಯಲ್ಲಿ, ಶೇ.90 ಭಾಗವನ್ನು ಪೂರೈಸುತ್ತವೆ,

- ಪ್ರಪಂಚದ ಸ್ವಾಭಾವಿಕ, ರಬ್ಬರ್ ಮತ್ತು ಚಹ ಉತ್ಪಾದನೆಯಲ್ಲಿ ಏಷ್ಯ ಮುಂದಿದೆ.
- ಜನವರಿಯಲ್ಲಿ ಸೈಬೀರಿಯಾದ ವರ್ಕಯಾನಸ್ಕ್ - 51° ಸೆ ಮತ್ತು ಓಮಿಯಾಕ್ಸಿ 71° ಸೆ.ಕನಿಷ್ಠ ಉಷ್ಣಾಂಶವನ್ನು ದಾಖಲಿಸುತ್ತವೆ.

- ಭಾರತದ ಮೇಘಾಲಯ ರಾಜ್ಯದ ಮಾಸಿನ್‌ರಾಮ್ ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಪಡೆಯುತ್ತದೆ. **(1187 ಸೆಂ.ಮೀ)**

### ಟಂಡ್ರ ಸಸ್ಯವರ್ಗ :

- ಈ ಸಸ್ಯವರ್ಗವು ಆರ್ಕ್ಟಿಕ್ ಕರಾವಳಿಯ ಉದ್ದಕ್ಕೂ ಕಿರಿದಾದ ಭಾಗದಲ್ಲಿ ಕಂಡುಬರುತ್ತದೆ.
- ಇದು ಬಹುವಾಗಿ ನೀರ್ಗಲ್ಲು ಮತ್ತು ಹಿಮದಿಂದಾವರಿಸಿರುತ್ತದೆ. ಹೀಗಾಗಿ ಸಸ್ಯ ಬೆಳವಣಿಗೆ ಪಾಚಿ ಮತ್ತು ಶಿಲಾವಲ್ಕಗಳಿಗೆ ಸೀಮಿತಗೊಂಡಿದೆ.

### ಶಂಕುವಿನಾಕಾರದ ಮರಗಳ (ಕೊನಿಫೆರಸ್) ಅರಣ್ಯಗಳು :

- ಟಂಡ್ರ ಪ್ರದೇಶದಲ್ಲಿ ಹಂಚಿಕೆಯಾಗಿವೆ. ಅವುಗಳನ್ನು `ಟೈಗಾ ಅರಣ್ಯ' ಎಂತಲೂ ಕರೆಯಲಾಗಿದೆ.
- ಫರ್, ಸ್ಪ್ರೂಸ್, ಲಾರ್ಚ್ ಮತ್ತು ಪೈನ್ ಎಂಬುವವು ಇಲ್ಲಿ ಬೆಳೆಯುವ ಮುಖ್ಯ ಮರಗಳು.

### ಸಮಶೀತೋಷ್ಣವಲಯದ ಹುಲ್ಲುಗಾವಲು (ಸ್ಟೆಪ್ಪೀಸ್) :

- ಮಧ್ಯ ಏಷ್ಯ ಮತ್ತು ಮರುಭೂಮಿ ಮತ್ತು ಅರೆಮರುಭೂಮಿಗಳ ಅಂಚುಗಳಲ್ಲಿ ಕಂಡುಬರುತ್ತದೆ.
- ಕಡಿಮೆ ಮಳೆಯಿಂದಾಗಿ ಇಲ್ಲಿ ಕಡಿಮೆ ಎತ್ತರವುಳ್ಳ ಹುಲ್ಲು ಬೆಳೆಯುತ್ತದೆ.

### ಮರುಭೂಮಿ ಸಸ್ಯವರ್ಗ :



Scanned with OKEN Scanner

- ಇದು ಏಷ್ಯದ ಉಷ್ಣವಲಯ ಮತ್ತು ಸಮಶೀತೋಷ್ಣವಲಯಗಳ ಮರುಭೂಮಿಗಳಲ್ಲಿ ಕಂಡುಬರುತ್ತದೆ. ಉದಾ: ಅರೇಬಿಯ, ಇರಾನ್, ಥಾರ್ ಮರುಭೂಮಿ ಇತ್ಯಾದಿ.
- ಇಲ್ಲಿ ಮುಳ್ಳಿನ ಗಿಡಗಂಟಿ, ಕುರುಚಲು ಸಸ್ಯ ಮತ್ತು ಹುಲ್ಲುಗಳು ಮಾತ್ರ ಬೆಳೆಯುವವು. ಓಯಾಸಿಸ್‌ಗಳ ಬಳಿ ಖರ್ಜೂರ ಮತ್ತು ತಾಳೆ ಜಾತಿ ಮರಗಳು ಕಂಡುಬರುವವು

### ಮಾನ್ಸೂನ್ ಅರಣ್ಯಗಳು :

- ದಕ್ಷಿಣ, ಆಗ್ನೇಯ ಮತ್ತು ಪೂರ್ವ ಏಷ್ಯ ಭಾಗಗಳಲ್ಲಿ ಕಂಡುಬರುತ್ತವೆ. ಇಲ್ಲಿ ಹೆಚ್ಚು ಶಾಖ ಮತ್ತು ಮಳೆ ಬೀಳುವುದರಿಂದ ಕಾಡುಗಳಿರುತ್ತವೆ.
- ತೇಗ, ಸಲೆ, ಆಲ, ಬಿದಿರು, ಶ್ರೀಗಂಧ ಹಾಗೂ ಇನ್ನೂ ಹಲವು ಗಟ್ಟಿ ಮರಗಳು ಇಲ್ಲಿ ಬೆಳೆಯುತ್ತವೆ. ಅವು ಶರತ್ಕಾಲದಲ್ಲಿ ತಮ್ಮ ಎಲೆಗಳನ್ನು ಉದುರಿಸುತ್ತವೆ.

### ಸಮಭಾಜಕ ವೃತ್ತ ಪ್ರದೇಶದ ಅರಣ್ಯಗಳು :

- ಹೆಚ್ಚಾಗಿ ಪೂರ್ವ ಇಂಡೀಸ್ ಮತ್ತು ಅಧಿಕ ಮಳೆ ಬೀಳುವ ಮಾನ್ಸೂನ್ ಪ್ರದೇಶಗಳಲ್ಲಿ ಕಂಡುಬರುತ್ತವೆ
- .ಅವು ಸದಾ ಹಸಿರು ಮತ್ತು ಎತ್ತರಕ್ಕೆ ಬೆಳೆಯುವ ಮರಗಳಿಂದ ಕೂಡಿರುತ್ತವೆ.
- ಮಹಾಗನಿ, ಎಬೋನಿ, ರಬ್ಬರ್, ಬಿದಿರು, ಬೀಟೆ ಇಲ್ಲಿ ಬೆಳೆಯುವ ಪ್ರಮುಖ ಮರಗಳು

### ಮೆಡಿಟರೇನಿಯನ್ ಸಸ್ಯವರ್ಗವು

- ಏಷ್ಯದ ನೈಋತ್ಯ ಭಾಗಗಳಲ್ಲಿ ಕಂಡುಬರುವುದು.
- ಇಲ್ಲಿ ಆಲಿವ್, ಫಿಗ್, ಓಕ್ ಮರಗಳು ಮತ್ತು ಕುರುಚಲು ಸಸ್ಯ ಬೆಳೆಯುತ್ತವೆ. ಮರಗಳು ಕಡಿಮೆ ಎತ್ತರಕ್ಕೆ ಬೆಳೆಯುತ್ತವೆ

ಪ್ರಪಂಚದಲ್ಲಿ ಅತಿ ಹೆಚ್ಚು ಕಲ್ಲಿದ್ದಲು ನಿಕ್ಷೇಪ ಮತ್ತು ಉತ್ಪಾದನೆ ಎರಡರಲ್ಲೂ ಚೀನಾ ದೇಶ ಮೊದಲನೆಯದು



Scanned with OKEN Scanner

ಪೆಟ್ರೋಲಿಯಂ ಶಬ್ದ (Petroleum)ವು 'Petra' ಎಂದರೆ 'ಕಲ್ಲು' ಮತ್ತು 'Oleum' ಎಂದರೆ 'ತೈಲ' ಎಂಬ ಎರಡು ಲ್ಯಾಟಿನ್ ಭಾಷಾ ಪದಗಳಿಂದ ಸಂಯೋಜಿತವಾದದ್ದು.

- ಸೌದಿ ಅರೇಬಿಯ ಪ್ರಪಂಚದಲ್ಲೇ ಅತಿ ಹೆಚ್ಚು ಪೆಟ್ರೋಲಿಯಂ ಉತ್ಪಾದಿಸುವ ದೇಶ

ಕಿಹೀನ್ ಪ್ರದೇಶವು ಟೋಕಿಯೊ, ಕವಾಸಾಕಿ ಮತ್ತು ಯೋಕೊಹಾಮ ನಗರಗಳನ್ನೊಳಗೊಂಡ ದೊಡ್ಡ ಕೈಗಾರಿಕಾ ಪ್ರದೇಶ

ಭಾರತ – ಪ್ರಮುಖ ಕೈಗಾರಿಕಾ ಪ್ರದೇಶಗಳು :

1) ಹೂಗ್ಲಿ-ಕೋಲ್ಕತಾ ಪ್ರದೇಶ,

2) ಮುಂಬಯಿ -ಪುಣೆ ಪ್ರದೇಶ,

3) ಅಹ್ಮದಾಬಾದ್ -ವಡೋದರ ಪ್ರದೇಶ,

4) ಮದುರೈ-ಕೊಯಮತ್ತೂರು-ಬೆಂಗಳೂರು ಪ್ರದೇಶ,

5) ಛೋಟನಾಗಪುರ ಪ್ರದೇಶ

6) ದೆಹಲಿ-ಮೀರತ್,

7) ವಿಶಾಖಪಟ್ಟಣ, ಹಾಗೂ

8) ಕೊಲ್ಲಮ್-ತಿರುವನಂತಪುರ ಪ್ರದೇಶ.

ಏಷ್ಯಾಖಂಡದಲ್ಲಿ ಸುಮಾರು 456 ಕೋಟಿ ಜನಸಂಖ್ಯೆಯಿದೆ. ಇದು ಪ್ರಪಂಚದ ಜನಸಂಖ್ಯೆಯ ಶೇ.60 ಭಾಗದಷ್ಟಾಯಿತು

ಏಷ್ಯಾ ಖಂಡದ ಸರಾಸರಿ ಜನಸಾಂದ್ರತೆ ಪ್ರತಿ ಚದರ ಕಿ.ಮೀ.ಗೆ 150 ಜನರು

- ಏಷ್ಯಾ ಖಂಡದ ಅತ್ಯಂತ ಎತ್ತರವಾದ ಬಿಂದು ಮೌಂಟ್ ಎವರೆಸ್ಟ್ (8848 ಮೀ.)
- ಏಷ್ಯದ ಅತ್ಯಂತ ಕೆಳಮಟ್ಟದ ಬಿಂದು ಮೃತ ಸಮುದ್ರ.

6ನೇ ತರಗತಿ ಸಮಾಜ ವಿಜ್ಞಾನ ಭೂಗೋಳ ( 2022 )ಪರಿಷ್ಕೃತ ಮುದ್ರಣ



Scanned with OKEN Scanner

- ಪ್ರಪಂಚದಲ್ಲೇ ಹೆಚ್ಚಿನ ಸಂಖ್ಯೆಯ ಹಿಮನದಿಗಳು ಕಾರಾಕೊರಂ ಪರ್ವತ ಸರಣಿಗಳಲ್ಲಿವೆ.
- ಟಿಬೆಟ್ ಪ್ರಪಂಚದ ಅತಿ ಎತ್ತರವಾದ ಪ್ರಸ್ಥಭೂಮಿ. ಇದನ್ನು ಪ್ರಪಂಚದ ಮೇಲ್ಛಾವಣಿ ಎಂದು ಕರೆಯಲಾಗಿದೆ.
- ಕ್ಯಾಸ್ಪಿಯನ್ ಸಮುದ್ರವು ಪ್ರಪಂಚದ ಅತ್ಯಂತ ವಿಶಾಲವಾದ ಒಳನಾಡಿನ ಜಲರಾಶಿಯಾಗಿದೆ.
- ದಕ್ಷಿಣ ಸೈಬೀರಿಯಾದಲ್ಲಿರುವ ಬೈಕಲ್ ಸರೋವರವು ಪ್ರಪಂಚದಲ್ಲೇ ಆಳವುಳ್ಳದ್ದು.
- ಕ್ಷೇತ್ರ ಮತ್ತು ಜನಸಂಖ್ಯೆ ಎರಡರಲ್ಲೂ ಏಷ್ಯದ ಚಿಕ್ಕದೇಶ ಮಾಲ್ದೀವ್ಸ್

NAVACHETANA EDUCATIONS
7019752139



Scanned with OKEN Scanner